# ಗಣೇಶಾಷ್ಟಕ



ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೧೯೯೮

ಅಧ್ಯಾತ್ಮಗ್ರಂಥಾವಳಿ

# ಗಣೇಶಾಷ್ಟಕ

( ಭಾವಾರ್ಥವಿವರಣೆಗಳೊಡನೆ )

ಬರೆದವರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೩೯

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
೧೯೯೮

ಒಂದನೆಯ ಮುದ್ರಣ ೧೯೩೨ - ೧೦೦೦ ಪ್ರತಿಗಳು
ಎರಡನೆಯ ಸಂಸ್ಕರಣ ೧೯೬೩ - ೨೦೦೦ ಪ್ರತಿಗಳು
ಮೂರನೆಯ ಸಂಸ್ಕರಣ ೧೯೯೮- ೨೦೦೦ ಪ್ರತಿಗಳು

All Rights Reserved
© ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೨೧೩, ಬಾಲಾಜಿರಸ್ತೆ
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೬೭೭೦೧೬

ಮುದ್ರಕರು :
**ಸಾಯಿನಾಥ್ ಗ್ರಾಫಿಕ್ಸ್**
೨೦೫, ಬಾಷ್ಯಂ ರಸ್ತೆ
ಬೆಂಗಳೂರು - ೫೬೦ ೦೫೩
ದೂರವಾಣಿ : ೬೭೦೦೬೫೦

# ಮುನ್ನುಡಿ

ಎಂಟು ಶ್ಲೋಕಗಳಲ್ಲಿ ಮುಗಿದಿರುವ ಈ ಪುಟ್ಟ ಸ್ತೋತ್ರದಲ್ಲಿ **''ಬ್ರಹ್ಮೈವೇದಂವಿಶ್ವಮ್''** ( ಈ ಪ್ರಪಂಚವೆಲ್ಲವೂ ಬ್ರಹ್ಮವೇ) ಎಂಬ ಉಪನಿಷತ್ ಸಿದ್ಧಾಂತವು ಮನೋಹರ ರೀತಿಯಿಂದ ಪ್ರತಿಪಾದಿತವಾಗಿರುವದು. ಸ್ತೋತ್ರ ರೂಪದಲ್ಲಿ ಭಗವಂತನ ಆರಾಧನೆಮಾಡಬೇಕೆಂದು ಬಯಸುವವರಿಗೆ ಈ ಕೃತಿಯಲ್ಲಿ ಅವಕಾಶವನ್ನು ಕಲ್ಪಿಸಿದೆ. ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಅನುಗ್ರಹಿಸಿರುವ ವಿವರಣೆಯು ಮುಮುಕ್ಷುಗಳಿಗೆ ಅನುಸಂಧಾನಯೋಗ್ಯವಾಗಿದೆ.

ಮೂರನೆಯ ಬಾರಿಗೆ ಮರುಮುದ್ರಣವಾಗಿ ವಾಚಕರ ಕೈಸೇರುತ್ತಿರುವ ಈ ಗ್ರಂಥದ ಪ್ರಕಟಣೆಗೆ ಹಾಸನನಗರದಲ್ಲಿರುವ ಶ್ರೀ ಹೆಚ್.ವಿ. ರಾಮಕೃಷ್ಣರವರ ಪೂಜ್ಯ ತಂದೆಯವರಾದ ಮ ॥ ರಾ ॥ ಶ್ರೀ ॥ ವೆಂಕಟಸುಬ್ಬಯ್ಯನವರು ತಮ್ಮ ಪೂಜ್ಯ ತೀ॥ ರವರಾದ ದಿವಂಗತ ಸೂರ್ಯನಾರಾಯಣಪ್ಪನವರ ನೆನಪಿಗಾಗಿ ರೂ. ೩,೦೦೦ (ಮೂರು ಸಾವಿರ ರೂಪಾಯಿಗಳನ್ನು ) ಉದಾರವಾಗಿ ದಾನ ಮಾಡಿರುತ್ತಾರೆ. ಸಂಸ್ಥೆಯ ಪರವಾಗಿ ಇವರಿಗೆ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಈ ಮೂಲಕ ಸಮರ್ಪಿಸಲಾಗಿದೆ.

ವಾಚಕರು ಎಂದಿನಂತೆ ಈ ಗ್ರಂಥವನ್ನು ಬರಮಾಡಿಕೊಂಡು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಇತಿ ಸಜ್ಜನ ವಿಧೇಯ

ಹೊಳೆನರಸೀಪುರ,

ತಾ ॥ ೧೩-೧೧-೧೯೯೮

**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ

# ಅಧ್ಯಾತ್ಮಪ್ರಕಾಶಕಾರ್ಯಾಲಯ

## ಹೊಳೆನರಸೀಪುರ ೫೭೩೨೧೧

**ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು ?**

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು - ವೇದಾಂತಸಪ್ತಾಹ , ವೇದಾಂತಶಿಬಿರ ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ **"ಅಧ್ಯಾತ್ಮಪ್ರಕಾಶ"** ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದು ಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಅಥವಾ ಮಹಾಪೋಷಕರು - ಎನಿಸಿ ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು ; ಈ ಪ್ರಕಟನೆಗಳ ಪುಸ್ತಕ ಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ, ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬. ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾನಿಲಯ, ಪೂಜಾಮಂದಿರ, ಗುರು ಮಂದಿರ , ಪುಸ್ತಕಭಂಡಾರ - ಇವಕ್ಕೂ ಯಥೋಚಿತವಾಗಿ ಸಹಾಯ ವನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು. ದಾನಿಗಳು 80G (ಆದಾಯ ತೆರಿಗೆ ವಿನಾಯತಿ) ಯನ್ನು ಸಹ ಪಡೆಯಬಹುದು.

**ಹೆಚ್ಚಿನ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.**

# ಗಣೇಶಾಷ್ಟಕ

ಯತೋಽನನ್ತಶಕ್ತೇರನನ್ತಾಶ್ಚ ಜೀವಾ
ಯತೋ ನಿರ್ಗುಣಾದಪ್ರಮೇಯಾದ್ಗುಣಾಸ್ತೇ ।
ಯತೋ ಭಾತಿ ಸರ್ವಂ ತ್ರಿಧಾ ಭೇದಭಿನ್ನಂ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥೧॥

ಯತಶ್ಚಾವಿರಾಸೀಜ್ಜಗತ್ಸರ್ವಮೇತತ್
ತಥಾಬ್ಜಾಸನೋ ವಿಶ್ವಗೋ ವಿಶ್ವಗೋಪ್ತಾ ।
ತಥೇನ್ದ್ರಾದಯೋ ದೇವಸಙ್ಘಾ ಮನುಷ್ಯಾಃ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥೨॥

ಯತೋ ವಹ್ನಿಭಾನೂ ಭವೋ ಭೂರ್ಜಲಂ ಚ
ಯತಃ ಸಾಗರಾಶ್ಚನ್ದ್ರಮಾ ವ್ಯೋಮ ವಾಯುಃ ।
ಯತಃ ಸ್ಥಾವರಾ ಜಙ್ಗಮಾ ವೃಕ್ಷಸಙ್ಘಾಃ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥೩॥

ಯತೋ ದಾನವಾಃ ಕಿನ್ನರಾ ಯಕ್ಷಸಙ್ಘಾಃ
ಯತಶ್ಚಾರಣಾ ವಾರಣಾಃ ಶ್ವಾಪದಾಶ್ಚ
ಯತಃ ಪಕ್ಷಿಕೀಟಾ ಯತೋ ವೀರುಧಶ್ಚ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥೪॥

ಯತೋ ಬುದ್ಧಿರಜ್ಞಾನನಾಶೋ ಮುಮುಕ್ಷೋ-
ರ್ಯತಃ ಸಂಪದೋ ಭಕ್ತಸಂತೋಷದಾಃ ಸ್ಯುಃ ।
ಯತೋ ವಿಘ್ನನಾಶೋ ಯತಃ ಕಾರ್ಯಸಿದ್ಧಿಃ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥೫॥

ಯತಃ ಪುತ್ರಸಂಪದ್ಯತೋ ವಾಂಛಿತಾರ್ಥೋ
ಯತೋಽಭಕ್ತವಿಘ್ನಾಸ್ತಥಾನೇಕರೂಪಾಃ ।
ಯತಃ ಶೋಕಮೋಹೌ ಯತಃ ಕಾಮ ಏವಂ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೬ ॥

ಯತೋಽನನ್ತಭಕ್ತಿಃ ಸ ಶೇಷೋ ಬಭೂವ
ಧರಾಧಾರಣೇಽನೇಕರೂಪೇ ಚ ಶಕ್ತಃ ।
ಯತೋಽನೇಕಧಾ ಸ್ವರ್ಗಲೋಕಾ ಹಿ ನಾನಾ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೭ ॥

ಯತೋ ವೇದವಾಚೋಽತಿಕುಂಠಾ ಮನೋಭಿಃ
ಸದಾ ನೇತಿ ನೇತೀತಿ ಯತ್ತಾ ಗೃಣನ್ತಿ ।
ಪರಬ್ರಹ್ಮರೂಪಂ ಚಿದಾನನ್ದಭೂತಂ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥ ೮ ॥

ಪುನರೂಚೇ ಗಣಾಧೀಶಃ ಸ್ತೋತ್ರಮೇತತ್ಪಠೇನ್ನರಃ ।
ತ್ರಿಸಂಧ್ಯಂ ತ್ರಿದಿನಂ ತಸ್ಯ ಸರ್ವಕಾರ್ಯಂ ಭವಿಷ್ಯತಿ ॥ ೧ ॥
ಯೋ ಜಪೇದಷ್ಟದಿವಸಂ ಶ್ಲೋಕಾಷ್ಟಕಮಿದಂ ಶುಭಮ್ ।
ಅಷ್ಟವಾರಂ ಚತುರ್ಥ್ಯಾಂ ತು ಸೋಽಷ್ಟಸಿದ್ಧೀರವಾಪ್ನುಯಾತ್ ॥ ೨ ॥
ಯಃ ಪಠೇನ್ಮಾಸಮಾತ್ರಂ ತು ದಶವಾರಂ ದಿನೇ ದಿನೇ ।
ಸ ಮೋಚಯೇದ್ಬನ್ಧಗತಂ ರಾಜವಧ್ಯಂ ನ ಸಂಶಯಃ ॥ ೩ ॥
ವಿದ್ಯಾಕಾಮೋ ಲಭೇದ್ವಿದ್ಯಾಂ ಪುತ್ರಾರ್ಥೀ ಪುತ್ರಮಾಪ್ನುಯಾತ್ ।
ವಾಂಛಿತಾನ್ ಲಭತೇ ಸರ್ವಾನೇಕವಿಂಶತಿವಾರತಃ ॥ ೪ ॥
ಯೋ ಜಪೇತ್ಪರಯಾ ಭಕ್ತ್ಯಾ ಗಜಾನನಪರೋ ನರಃ
ಏವಮುಕ್ತ್ವಾ ತತೋ ದೇವಶ್ಚಾನ್ತರ್ಧಾನಂ ಗತಃ ಪ್ರಭುಃ ॥ ೫ ॥

ಇತಿ ಶ್ರೀ ಗಣೇಶಪುರಾಣೇ ಉಪಾಸನಾಖಂಡೇ ಶ್ರೀಗಣೇಶಾಷ್ಟಕಂ
ಸಂಪೂರ್ಣಮ್

॥ श्री विघ्नेश्वराय नमः ॥

# ಗಣೇಶಾಷ್ಟಕ

೧

ಯತೋಽನನ್ತಶಕ್ತೇರನನ್ತಾಶ್ಚ ಜೀವಾ
ಯತೋ ನಿರ್ಗುಣಾದಪ್ರಮೇಯಾದ್ ಗುಣಾಸ್ತೇ ।
ಯತೋ ಭಾತಿ ಸರ್ವಂ ತ್ರಿಧಾ ಭೇದಭಿನ್ನಂ
ಸದಾ ತಂ ಗಣೇಶಂ ನಮಾಮೋ ಭಜಾಮಃ ॥

**ಭಾವಾರ್ಥ**:– ಲೆಕ್ಕವಿಲ್ಲದಷ್ಟು ಶಕ್ತಿಗಳುಳ್ಳ ಯಾವಾತನಿಂದ ಎಣಿಸಲಳವಲ್ಲದಷ್ಟು ಜೀವರುಗಳು ಉಂಟಾಗಿರುವರೋ, ಪರಮಾರ್ಥದೃಷ್ಟಿಯಿಂದ ನೋಡಿದರೆ ನಿರ್ಗುಣನೂ ಯಾವ ಪ್ರಮಾಣಗಳಿಗೂ ನಿಲುಕದವನೂ ಆಗಿರುವ ಯಾವಾತನಿಂದ ಪ್ರಸಿದ್ಧವಾದ ಗುಣಗಳೆಲ್ಲವೂ ಹೊರತೋರಿಕೊಂಡಿರುವವೋ, ಮೂರುಬಗೆಯ ಭೇದದಿಂದ ಬೇರೆಬೇರೆಯಾಗಿರುವ ಈ ಪ್ರಪಂಚವೆಲ್ಲವೂ ಯಾವಾತನ ಮಹಿಮೆಯಿಂದಲೇ ಬೆಳಗುತ್ತಿರುವದೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

## ವಿವರಣೆ

### ಅವತರಣಿಕೆ

ಪರಮಾತ್ಮನಿಗೆ ಇಂಥದ್ದೆಂದು ಗೊತ್ತಾಗಿರುವ ಒಂದು ಹೆಸರಾಗಲಿ ಒಂದು ರೂಪವಾಗಲಿ ಇರುವದಿಲ್ಲ ; ಆದರೂ ಆತನನ್ನು ಧ್ಯಾನಮಾಡುವವರು ಶಾಸ್ತ್ರೋಕ್ತವಾದ ಬಗೆಬಗೆಯ ರೂಪಗಳಿಂದಲೂ ಹೆಸರುಗಳಿಂದಲೂ ಧ್ಯಾನ ಮಾಡಿ ಸದ್ಗತಿಯನ್ನು ಹೊಂದಿರುತ್ತಾರೆ. ತನ್ನನ್ನು ಧ್ಯಾನಮಾಡುವವರನ್ನು ಅನುಗ್ರಹಿಸುವದಕ್ಕಾಗಿ ಕರುಣಾಳುವಾದ ಆ ಪರಮೇಶ್ವರನು ಮಾಯಾಮಯವಾದ ಯಾವ ರೂಪವನ್ನಾದರೂ ಯಾವ ಹೆಸರನ್ನಾದರೂ ತೆಗೆದುಕೊಳ್ಳುವನು.

ಈ ಸ್ತೋತ್ರದಲ್ಲಿ **ಗಣೇಶ**ನೆಂಬ ಹೆಸರಿನಿಂದ ಆ ಪರಮಾತ್ಮನ ಮಹಿಮೆಯನ್ನು ಕೊಂಡಾಡಿರುತ್ತದೆ.

**'ಗಣೇಶ'**ನೆಂಬ ಮಾತಿಗೆ ಗಣಗಳಿಗೆ ಒಡೆಯನು-ಎಂದು ಅರ್ಥ ವಾಗುವದು. ಪರಮಾತ್ಮನು ಸಕಲದೇವತೆಗಳಿಗೂ ಒಡೆಯನಾದ್ದರಿಂದ ಈ ಹೆಸರು ಆತನಿಗೆ ಬಹು ಚೆನ್ನಾಗಿ ಒಪ್ಪುತ್ತದೆ. ದೇವತೆಗಳಲ್ಲಿ ಒಬ್ಬೊಬ್ಬರು ಒಂದೊಂದು ಫಲವನ್ನು ಕೊಡುವದಕ್ಕೆ ಮಾತ್ರ ಶಕ್ತರು; ಅದೂ ಭಗವಂತನ ಅನುಗ್ರಹದಿಂದಲೇ. ಆ ಫಲವೂ ಸ್ವಲ್ಪ ಕಾಲದವರೆಗೆ ಮಾತ್ರ ಇರುವದು. ಪರಮಾತ್ಮನ ಶಕ್ತಿಯು ಅಂಥದ್ದಲ್ಲ. ಅವನು ಈ ಲೋಕದಲ್ಲಿ ನಮಗೆ ಬೇಕಾದದ್ದನ್ನೆಲ್ಲ ಕೊಡಬಲ್ಲನು, ಪರಲೋಕದಲ್ಲಿಯೂ ನಮಗೆ ಸುಖವನ್ನು ಕೊಡಬಲ್ಲನು. ಇಷ್ಟೇಅಲ್ಲ, ಹುಟ್ಟುಸಾವುಗಳ ಕೋಟಲೆಯಿಲ್ಲದೆ ಎಂದೆಂದಿಗೂ ಆನಂದದಿಂದ ಇರಬಹುದಾದ ಮೋಕ್ಷವೆಂಬ ಪರಮಪುರುಷಾರ್ಥವನ್ನೂ ಕೊಡಬಲ್ಲನು. ದೇವತೆಗಳ ಗುಂಪೆಲ್ಲ ಸೇರಿ ನಮಗೆ ಕೊಡಬಹುದಾದ ಫಲಗಳೆಲ್ಲಕ್ಕಿಂತ ಹೆಚ್ಚಿನದಾದ ಈ ಉತ್ತಮಫಲವನ್ನು ಕೊಡುವ ಆತನನ್ನು, ದೇವತೆಗಳಿಗೂ ಈ ಉತ್ತಮಫಲವನ್ನು ಅನುಗ್ರಹಿಸುವ ಆತನನ್ನು, **'ಗಣೇಶ'** ನೆಂದು ಕರೆಯುವದು ಯುಕ್ತವೇ ಆಯಿತಲ್ಲವೆ?

## ಅನನ್ತಶಕ್ತೇಃ

ಇಂಥ ಫಲಗಳನ್ನು ಕೊಡುವ ಸಾಮರ್ಥ್ಯವು ಪರಮೇಶ್ವರನಿಗೆ ಎಲ್ಲಿಂದ ಬಂದಿತೆಂದು ಯಾರಾದರೂ ಕೇಳಬಹುದು. ಸಾಮರ್ಥ್ಯವು ಯಾವಾಗಲೂ ಮತ್ತೊಬ್ಬರಿಂದಲೇ ಬರುವದೆಂಬ ತಪ್ಪು ತಿಳಿವಳಿಕೆಯಿಂದ ಈ ಪ್ರಶ್ನೆಯು ಹುಟ್ಟುವದು. ಬಿಸಿನೀರಿಗೆ ಬಿಸಿ ಎಲ್ಲಿಂದ ಬಂದಿತೆಂದರೆ ಬೆಂಕಿಯಿಂದ ಬಂದಿತೆಂದು ಉತ್ತರವನ್ನು ಹೇಳಬಹುದು; ಆದರೆ ಬೆಂಕಿಗೆ ಬಿಸಿಯು ಎಲ್ಲಿಂದ ಬಂದಿತೆಂದು ಕೇಳಿದರೆ ಏನು ಹೇಳಬೇಕು? ಬೆಂಕಿಗೆ ಬಿಸಿಯು ಹೇಗೆ ಸ್ವಭಾವವೋ ಹಾಗೆ ಪರಮಾತ್ಮನಿಗೆ ಈ ಶಕ್ತಿಯೂ ಸ್ವಭಾವವು. ಇಷ್ಟು ಮಾತ್ರವೇ ಅಲ್ಲ. ಬೆಂಕಿಗೆ ಸುಡುವದೊಂದೇ ಶಕ್ತಿಯೆಂಬ ಲೆಕ್ಕವಿರುವದು. ಹೀಗೆ, ನೀರಿಗೆ ನೆನಸುವ ಶಕ್ತಿ. ಗಾಳಿಗೆ ಆರಿಸುವ ಶಕ್ತಿ - ಎಂದು ಕೆಲಕೆಲವು ಪದಾರ್ಥಗಳಿಗೆ

ಕೆಲಕೆಲವು ಶಕ್ತಿಗಳು ಗೊತ್ತಾಗಿರುವವು. ಕೆಲವು ಪದಾರ್ಥಗಳಲ್ಲಿ ಎರಡುಮೂರು ಶಕ್ತಿಗಳು ಇರಬಹುದು; ಕೆಲವು ಪದಾರ್ಥಗಳಲ್ಲಿ ಇನ್ನೂ ಹೆಚ್ಚು ಶಕ್ತಿಗಳಿರಬಹುದು. ಆದರೆ ಶ್ರೀಗಣೇಶನ ವಿಷಯದಲ್ಲಿ ಹಾಗಲ್ಲ; ಅವನಲ್ಲಿ ಇಷ್ಟು ಶಕ್ತಿಗಳೆಂಬ ಲೆಕ್ಕವೇ ಇಲ್ಲ. ಅವನು **ಅನಂತ** ಶಕ್ತಿಯುಳ್ಳವನು.

'ಪರಮಾತ್ಮನು ಅನಂತಶಕ್ತಿಗಳುಳ್ಳವನು' ಎನ್ನುವದೂ ವ್ಯವಹಾರ ದೃಷ್ಟಿಯಿಂದ. ಏಕೆಂದರೆ ಬೆಂಕಿಗೆ ಸುಡುವ ಶಕ್ತಿ ಇದೆ-ಎಂದು ನಾವು ವ್ಯವಹರಿಸುವಾಗಲೂ ಬೆಂಕಿ, ಬಿಸಿ-ಇವೆರಡೂ ಒಂದೇ ವಸ್ತುವಾಗಿರುವವು. ಸುಡಲ್ಪಡುವ ವಸ್ತುಗಳ ದೃಷ್ಟಿಯಿಂದ ಬೆಂಕಿಗೆ 'ಸುಡುವ ಶಕ್ತಿ' ಇದೆ ಎಂದು ಜನರು ಕಲ್ಪಿಸುವಂತೆ, ಪರಮಾತ್ಮನಿಂದ ಉಂಟಾಗುವ ವಿಚಿತ್ರಸೃಷ್ಟಿಯ ದೃಷ್ಟಿಯಿಂದಲೇ ಆತನಿಗೆ ಅನಂತಶಕ್ತಿಗಳಿರುವವೆಂದು ಶಾಸ್ತ್ರಗಳು ಕಲ್ಪಿಸಿ ಹೇಳುತ್ತಿರುವವು. ನಿಜವಾಗಿ ನೋಡಿದರೆ ಶಕ್ತಿಗಳಿಗೂ ಶಕ್ತನಾದ ಗಣೇಶನಿಗೂ ಯಾವ ಭೇದವೂ ಇಲ್ಲ. ಆತನೊಬ್ಬನೇ ಪರಮಾರ್ಥ ವಾಗಿರುವವನು. ಹೀಗಿದ್ದರೂ ಅನುಗ್ರಾಹ್ಯರಾದ ಭಕ್ತರಿಗೆ ಅಪರವರ ಇಷ್ಟಾರ್ಥಗಳನ್ನೆಲ್ಲ ಸೃಷ್ಟಿಸಿಕೊಡುವನೆಂಬ ಕಾರಣದಿಂದ ಆತನನ್ನು ಅನಂತಶಕ್ತಿಗಳುಳ್ಳವನೆಂದು ಕರೆದಿರುವದೂ ಯುಕ್ತವೇ ಆಗಿರುತ್ತದೆ ಎಂದು ತಿಳಿಯಬೇಕು.

## ಅನನ್ತಾಶ್ಚ ಜೀವಾಃ

ಗಣಪತಿಯ ಈ ಲೆಕ್ಕವಿಲ್ಲದಷ್ಟು ಶಕ್ತಿಗಳಿಂದ ಆಗಿರುವ ಕಾರ್ಯಗಳನ್ನು ಒಂದೊಂದಾಗಿ ನೋಡುತ್ತಾಹೋದರೆ ಎಷ್ಟು ಜನ್ಮಗಳಾದರೂ ಮುಗಿಯುವಂತಿಲ್ಲ. ಏಕೆಂದರೆ ಚೇತನವೆಂದೂ ಅಚೇತನವೆಂದೂ ವಿಂಗಡವಾಗಿ ನಮ್ಮ ಮುಂದೆ ಹರಡಿಕೊಂಡು ತೋರುತ್ತಿರುವ ಈ ಬ್ರಹ್ಮಾಂಡವೆಲ್ಲಾ ಆತನಿಂದಲೇ ಆಗಿರುವದು. ಮೊದಲು ನೋಡಿರಿ. ಈ ಜಗತ್ತಿನಲ್ಲಿ ಎಷ್ಟು ಜೀವರಾಶಿಗಳಿವೆಯೋ ಯಾರು ಬಲ್ಲರು? ಎಂಬತ್ತುನಾಲ್ಕುಲಕ್ಷ ಜೀವರಾಶಿಗಳಿರುವವೆಂದು ನಮ್ಮ ಪುರಾಣಗಳಲ್ಲಿ ಆಗಾಗ್ಗೆ ವರ್ಣಿಸುವದುಂಟು; ಅದಕ್ಕೂ ಜೀವರಾಶಿಗಳ ಸಂಖ್ಯೆಯು ಲೆಕ್ಕಕ್ಕೆ ಸಿಕ್ಕುವದಿಲ್ಲವೆಂದು ಅರ್ಥವೇ ಹೊರತು ಗಣಿತಶಾಸ್ತ್ರದಂತೆ ಲೆಕ್ಕಹಾಕಿದರೆ ಸರಿಯಾಗಿ ಎಂಬತ್ತುನಾಲ್ಕು ಲಕ್ಷವೇ ಆಗುವದೆಂಬ

ಅಭಿಪ್ರಾಯವೇನೂ ಅಲ್ಲ. ಬೆಂಕಿಯಿಂದ ಛಿಟಿಛಿಟಿಲೆಂದು ಕಿಡಿಗಳು ಹೊರಕ್ಕೆ ಬರುವ ಹಾಗೆ ಆ ಪರಮಾತ್ಮನಿಂದಲೇ ಈ ಲೆಕ್ಕವಿಲ್ಲದಷ್ಟು ಜೀವರೂ ಆಗಿರುವರು.

## ಯತೋ ಭಾತಿ ಸರ್ವಮ್, ತ್ರಿಧಾಭೇದಭಿನ್ನಮ್

ಪರಮಾತ್ಮನಲ್ಲಿ ಯಾವ ಭೇದವೂ ಇಲ್ಲ. ಸಜಾತೀಯಭೇದ, ವಿಜಾತೀಯ ಭೇದ, ಸ್ವಗತಭೇದ-ಎಂದು ಭೇದವು ಮೂರು ಬಗೆ, ಹೇಗೆಂದರೆ ಮರಕ್ಕೆ ಗಿಡ, ಬಳ್ಳಿ-ಮುಂತಾದ ಸಸ್ಯವು ಸಜಾತೀಯಭೇದವುಳ್ಳದ್ದು; ಕಲ್ಲು , ಮಣ್ಣು- ಮುಂತಾದದ್ದು ವಿಜಾತೀಯಭೇದವುಳ್ಳದ್ದು; ಬುಡ, ಕೊಂಬೆ, ರೆಂಬೆ ಮುಂತಾದದ್ದು ಸ್ವಗತಭೇದವುಳ್ಳದ್ದು. ಚಿನ್ಮಾತ್ರನಾದ ಪರಮಾತ್ಮನು ಒಬ್ಬನೇ ಆದ್ದರಿಂದ ಅವ್ನನಲ್ಲಿ ತನ್ನ ಜಾತಿಯ ಎಂದರೆ ಪರಮಾತ್ಮನು ಬೇರೊಬ್ಬನು ಇಲ್ಲ; ಅವನಿಗಿಂತ ಬೇರೆಯ ಜಾತಿಯ ಚೇತನವಲ್ಲದ ಅಚೇತನಪದಾರ್ಥಗಳೂ ನಿಜವಾಗಿಲ್ಲ; ಅವನು ನಿರವಯವನಾದ್ದರಿಂದ ಸ್ವಗತಭೇದವೂ ಇಲ್ಲ. ಹೀಗಿದ್ದರೂ ಸರ್ವಥಾ ನಿರ್ಭೇದನಾಗಿರುವ ಆ ಪರಮಾತ್ಮನಿಂದ ಈ ಮೂರೂ ಭೇದಗಳಿಂದೊಡಗೂಡಿದ ಪದಾರ್ಥಗಳು ಎಂದರೆ ಚೇತನರಾದ ಅನೇಕ ಜೀವರುಗಳು, ಅಚೇತನವಾದ ಕಲ್ಲು, ಮಣ್ಣು ಮುಂತಾದ ವಸ್ತುಗಳು, ಹರಿಹರರೆಂಬ ಸ್ವಗತಭೇದದ ತ್ರಿಮೂರ್ತಿಗಳೂ ಉತ್ಪನ್ನರಾಗುತ್ತಾರೆ.

ಪರಮಾತ್ಮನಿಗಿಂತ ಬೇರೆಯಾಗಿ ಜೀವರುಗಳೂ ಜಡವಸ್ತುಗಳೂ ಇರುವವಲ್ಲವೆ? - ಎಂದು ಯಾರಾದರೂ ಕೇಳಬಹುದು. ಇಲ್ಲ. **ನಿರ್ಭೇದನಾದ ಪರಮಾತ್ಮನೊಬ್ಬನೇ ನಿಜವಾಗಿರುತ್ತಾನಾದರೂ ಅವನಿಂದ ಅನಂತವಾದ ಜೀವರುಗಳೂ** ಅನಂತವಾದ ಅಚೇತನಪದಾರ್ಥಗಳೂ ಹುಟ್ಟಿದಂತೆ ತೋರುತ್ತವೆ. ನಮ್ಮ ಸ್ವಪ್ನದಲ್ಲಿ ಒಂದು ಜಗತ್ತು ಹುಟ್ಟಿರುವಂತೆಯೇ ನಮ್ಮಂತೆಯೇ ಅನೇಕ ಜೀವರುಗಳೂ ನಮಗಿಂತ ಬೇರೆಯಾದ ಅನೇಕ ಜಡವಸ್ತುಗಳೂ ಇರುವಂತೆ ತೋರುತ್ತವೆಯಾದರೂ ನಿಜವಾಗಿ ನಾವು ಒಬ್ಬರೇ ಕನಸಿನಲ್ಲಿರುತ್ತೇವಲ್ಲವೆ? ಇದರಂತೆ ಪರಮಾತ್ಮನು ತಾನೊಬ್ಬನೇ ಇದ್ದು ತನ್ನ ಮಾಯಾಶಕ್ತಿಯಿಂದ ಜೀವಜಡವಸ್ತುಗಳನ್ನು ಸೃಷ್ಟಿಸಿರುತ್ತಾನೆ. ಅಜ್ಞಾನಿಗಳ ಕಣ್ಣಿಗೆ

ಪರಮಾತ್ಮನಲ್ಲಿ ಈ ಮೂರು ಬಗೆಯ ಭೇದಗಳು ಕಾಣುತ್ತಿದ್ದರೂ ನಿಜವಾಗಿ ಅವನಲ್ಲಿ ಯಾವ ಭೇದವೂ ಇಲ್ಲವೆಂಬುದನ್ನು ಜ್ಞಾನಿಗಳು ಬಲ್ಲರು.

**ಮಾಯೆ** ಎಂಬುದು ಮೂರು ಗುಣಗಳಿಂದ ಆಗಿರುತ್ತದೆ. ಅದರಲ್ಲಿ ಸತ್ತ್ವ, ರಜ, ತಮ-ಎಂಬ ಮೂರು ಭೇದಗಳು ಕಂಡುಬರುವವು. ಜ್ಞಾನ, ಪ್ರಕಾಶ, ಸುಖ, ಪ್ರಸನ್ನತೆ-ಮುಂತಾದವು ಸತ್ತ್ವದ ರೂಪಗಳು; ದುಃಖ, ದ್ವೇಷ, ತಾಪ, ಖೇದ, ಭೋಗ, ಅಭಿಮಾನ, ಚಲನೆ-ಮುಂತಾದವು ರಜೋಗುಣದ ರೂಪಗಳು; ಮರವೆ, ಸೋಮಾರಿತನ, ನಿದ್ರೆ, ಮಂಕು-ಮುಂತಾದವು ತಮೋಗುಣದ ರೂಪಗಳು. ಲೋಕದಲ್ಲಿ ಯಾವ ವಸ್ತುವನ್ನೇ ಆಗಲಿ ಒಳ್ಳೆಯದು, ಕೆಟ್ಟದ್ದು, ನಡುತರಕ್ಕೆ ಸೇರಿದ್ದು-ಎಂದು ವಿಂಗಡಿಸಬಹುದಾದ ಮೂರು ಪಂಗಡಗಳಲ್ಲಿ ಯಾವದಾದ ರೊಂದಕ್ಕೆ ಸೇರಿಸಬಹುದಾಗಿರುವದು. ಈ ಮೂರಕ್ಕೆ **ಗುಣಗಳು** ಎಂದು ಹೆಸರು. ಚೇತನರಾದ ಜೀವರುಗಳೆಲ್ಲರೂ ಮೂರು ಗುಣಗಳಿಂದ ಕೂಡಿಯೇ ಹುಟ್ಟಿರುವರಾದರೂ ಕೆಲವರು ಸತ್ತ್ವಪ್ರಧಾನರಾದ ದೇವತೆಗಳು; ಅವರು ಮೇಲಿನ ಲೋಕದಲ್ಲಿರುವರು. ಇನ್ನುಕೆಲವರು ತಮಃಪ್ರಧಾನವಾದ ಸ್ಥಾವರಪ್ರಾಣಿಗಳು; ಅಥವಾ ತಮಸ್ಸಿಗಿಂತ ರಜಸ್ಸು ಹೆಚ್ಚಾಗಿರುವ ಜಂಗಮಪ್ರಾಣಿಗಳು. ಇವು ಮನುಷ್ಯರಿಗಿಂತ ಕಡಿಮೆಯ ಕೀಳುವರ್ಗಕ್ಕೆ ಸೇರಿದವುಗಳಾಗಿರುತ್ತವೆ. ಪುಣ್ಯವು ಹೆಚ್ಚಾದವರು ದೇವತೆಗಳಾಗಿಯೂ, ಪಾಪವು ಹೆಚ್ಚಾದವರು ಸ್ಥಾವರ ಜಂಗಮ ಪ್ರಾಣಿಗಳಾಗಿಯೂ ಹುಟ್ಟಿರುತ್ತಾರೆ. ಪಾಪಪುಣ್ಯಗಳೆರಡೂ ಸಮವಾಗಿರುವವರು ಮನುಷ್ಯರಾಗಿರುತ್ತಾರೆ. ಇವರಲ್ಲಿಯೂ ಮೂರು ಗುಣಗಳು ಇರುವವಾದರೂ ಶಾಸ್ತ್ರದಲ್ಲಿ ಹೇಳಿರುವ ಪುಣ್ಯಕರ್ಮಗಳನ್ನು ಮಾಡಿ ದುಃಖವನ್ನು ಅನುಭವಿಸುವದಕ್ಕೂ ನಿಷಿದ್ಧ ಕರ್ಮಗಳನ್ನು ಮಾಡಿ ದುಃಖವನ್ನು ಅನುಭವಿಸುವ ದಕ್ಕೂ ಅವಕಾಶವಿರುವವರಾಗಿರುತ್ತಾರೆ. ದೇವತೆಗಳಿಗೆ ಪುಣ್ಯದಫಲವಾದ ಸುಖವನ್ನನುಭವಿಸುವದೊಂದಕ್ಕೇ ಅವಕಾಶವಿರುತ್ತದೆ. ಮನುಷ್ಯರಿಗೆ ಮಾತ್ರ ಧರ್ಮಾ ಧರ್ಮಗಳನ್ನು ಮಾಡಿ ಸುಖದುಃಖಗಳನ್ನು ಅನುಭವಿಸುವದಕ್ಕೂ ಅವಕಾಶವಿದೆ; ಪರಮಾತ್ಮ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೂ ಅವಕಾಶವಿದೆ.

ಅಂತೂ ಹೀಗೆ **ಗಣೇಶನೆಂಬ** ಪರಮಾತ್ಮನಿಂದಲೇ ಮೂರು ಗುಣಗಳ ತಾರತಮ್ಯದಿಂದ ಮೂರು ಬಗೆಯಾಗಿರುವ ಪ್ರಾಣಿಗಳು ಹುಟ್ಟಿರುವಂತೆ ಕಾಣಿಸುತ್ತಿರುವವು.

ಇದಿಷ್ಟೂ ಚೇತನವರ್ಗದ ಮಾತಾಯಿತು. ಇನ್ನು ಅಚೇತನವರ್ಗವೊ ಎಂದರೆ ಅದೂ ಮೂರು ಬಗೆಯ ಗುಣಗಳುಳ್ಳದ್ದೇ ಆದರೂ ಕೇವಲ ತಮೋಗುಣವೊಂದೇ ಅವುಗಳ ರೂಪದಿಂದ ಕಾಣಿಸಿಕೊಳ್ಳುತ್ತಿರುವದು. ಅಚೇತನ ಪದಾರ್ಥಗಳಿಗೆ ಅರಿವು ಇಲ್ಲವೇ ಇಲ್ಲವಾದ್ದರಿಂದ ಅವಕ್ಕೆ ಪುಣ್ಯವಾಗಲಿ ಪಾಪವಾಗಲಿ ಇಲ್ಲ; ಜ್ಞಾನಕ್ಕಂತೂ ಎಳ್ಳಷ್ಟೂ ಅವಕಾಶವಿರುವದಿಲ್ಲ. ಅಂತೂ ಹೀಗೆ ಮೂರು ಗುಣಗಳ ನಿಮಿತ್ತದಿಂದ ಆಗಿರುವ ಈ ಜಗತ್ತೆಲ್ಲವೂ ಆ ಪರಮಾತ್ಮನಿಂದಲೇ ಮಾಯಾವಿಯಿಂದ ಹೊರತೋರಿರುವ ಮಾಯೆಯಂತೆ ಕಾಣಿಸಿಕೊಳ್ಳುತ್ತಿದೆ. ಆದರೆ ಆ ಪರಮಾತ್ಮನಲ್ಲಿ ಮಾತ್ರ ಈ ಮೂರು ಗುಣಗಳಲ್ಲಿ ಒಂದೂ ಇಲ್ಲ. **ಆತನಿಂದಲೇ ಈ ಮೂರು ಗುಣಗಳ ಗುಂಪಿನ ಜಗತ್ತೆಲ್ಲವೂ ಸೃಷ್ಟಿಯಾಗಿರುವದು.**

## ಯತೋ ನಿರ್ಗುಣಾದಪ್ರಮೇಯಾದ್ ಗುಣಾಸ್ತೇ

ಪರಮಾತ್ಮನಲ್ಲಿ ಈ ಮೂರು ಗುಣಗಳೂ ಇಲ್ಲವೆಂದು ಹೇಳುವದಕ್ಕೆ ಕಾರಣವೇನು? ನಮಗೆ ತೋರುವ ವಸ್ತುಗಳೆಲ್ಲವೂ ಮೂರು ಗುಣಗಳ ಬೆರಕೆಯಿಂದಲೇ ಆಗಿರುವವೆಂದು ಶಾಸ್ತ್ರದಿಂದ ಗೊತ್ತಾಗಿದೆ. ಪರಮಾತ್ಮನು ಮಾತ್ರ **ನಿರ್ಗುಣನೆಂಬುದಕ್ಕೆ** ಯುಕ್ತಿಯೇನು? ಎಂದು ಕೆಲವರು ಕೇಳಬಹುದು. ಅದಕ್ಕೂ ಯುಕ್ತಿಯಿಲ್ಲದೆ ಇಲ್ಲ. ಪರಮಾತ್ಮನು ಶುದ್ಧಚೈತನ್ಯ ಸ್ವರೂಪನೆಂದು ಶಾಸ್ತ್ರಗಳಲ್ಲಿ ವರ್ಣಿಸಿರುವದನ್ನು ನೀವು ಕೇಳಿರಬಹುದು. ಚೈತನ್ಯವೆಂದರೆ ಅರಿವು. ನಾವು ಪದಾರ್ಥಗಳನ್ನು ಇಂದ್ರಿಯಗಳಿಂದ ನೋಡುವಾಗಲೂ ಬುದ್ಧಿಯಿಂದ ಅವುಗಳ ಸ್ವರೂಪವನ್ನು ನಿಶ್ಚಯಿಸುವಾಗಲೂ ನಮಗೆ ಅವುಗಳು ಇರುವವೆಂಬ ಅರಿವು ಉಂಟಾಗಬೇಕಷ್ಟೆ. ಇಂದ್ರಿಯಗಳಿಗೆ **ಪ್ರತ್ಯಕ್ಷ ಪ್ರಮಾಣವೆಂದೂ** ಪ್ರತ್ಯಕ್ಷದಿಂದ ಕಂಡದ್ದರ ಬಲದಿಂದ ಊಹಿಸುವದಕ್ಕೆ **ಅನುಮಾನಪ್ರಮಾಣವೆಂದೂ** ತರ್ಕ ಶಾಸ್ತ್ರದಲ್ಲಿ ಹೆಸರಿಟ್ಟಿದ್ದಾರೆ. ನಮಗೆ ಗೋಚರವಾಗುವ ವಸ್ತುಗಳಲ್ಲಿ ಕೆಲವು

ಪ್ರತ್ಯಕ್ಷಕ್ಕೆ, ಮತ್ತೆ ಕೆಲವು ಅನುಮಾನಕ್ಕೆ ವಿಷಯವಾಗಿರವವು; ದೂರದಲ್ಲಿರುವ ಮತ್ತು ಇಂದ್ರಿಯಗಳಿಗೆ ನಿಲುಕದೆ ಇದ್ದರೂ ಅನುಭವದಲ್ಲಿ ಕಂಡುಬರುವ ಮತ್ತೆಕೆಲವು ವಿಷಯಗಳನ್ನು ಅನುಭವಿಸಿರುವವರಿಂದ ಕೇಳಿತಿಳಿದುಕೊಳ್ಳ ಬೇಕಾಗುವದು. ಆಗ ಅವರ ಮಾತೇ ನಮಗೆ ಪ್ರಮಾಣವಾಗುವದು. ಇದಕ್ಕೆ ತರ್ಕಶಾಸ್ತ್ರದಲ್ಲಿ **ಶಬ್ದಪ್ರಮಾಣವೆಂದು** ಹೆಸರು. ಹೀಗೆ ವಸ್ತುಗಳು ಯಾವದಾದ ರೊಂದು ಪ್ರಮಾಣಕ್ಕೆ ಗೋಚರವಾಗಿರುವವಷ್ಟೆ; ಪರಮಾತ್ಮನು ಮಾತ್ರ ಹಾಗಲ್ಲ. ಅವನನ್ನು ಯಾವ ಪ್ರಮಾಣದಿಂದಲೂ ತಿಳಿಯುವದಕ್ಕೆ ಆಗುವದಿಲ್ಲ. ಏಕೆಂದರೆ ಇಂದ್ರಿಯ, ಮನಸ್ಸು- ಮುಂತಾದ ಪ್ರಮಾಣಗಳನ್ನು ಯಾವದರಿಂದ ನಾವು ಅರಿತುಕೊಳ್ಳಬೇಕೋ ಅಂಥ **ಸಾಕ್ಷಿಚೈತನ್ಯವೇ** ಅವನು ಆಗಿರುವನು. ಚೈತನ್ಯವು ಎಲ್ಲವನ್ನೂ ಅರಿಯುವದು, ಚೈತನ್ಯವನ್ನು ಅರಿಯುವದಕ್ಕೆ ಮತ್ತೆ ಬೇರೆ ಸಾಧನವಿಲ್ಲ. ನಮ್ಮೆಲ್ಲರಲ್ಲಿ ತೋರಿಕೊಳ್ಳುತ್ತಿರುವ ಈ ಸಾಕ್ಷಿಚೈತನ್ಯವೇ ಪರಮಾತ್ಮನ ನಿಜವಾದ ರೂಪವಾದ್ದರಿಂದ ಪರಮಾತ್ಮನನ್ನು ನೋಡುವದಕ್ಕೆ ಯಾವ ಪ್ರಮಾಣದ ಕೈಯಲ್ಲೂ ಸಾಗುವದಿಲ್ಲ. ಆದ್ದರಿಂದ ಅವನಿಗೆ **ಅಪ್ರಮೇಯನೆಂದು** ಹೆಸರು. ಮಿಕ್ಕ ವಸ್ತುಗಳು ಪ್ರಮೇಯಗಳು, ಎಂದರೆ ಪ್ರಮಾಣದಿಂದ ಅರಿಯುವದಕ್ಕೆ ಬರುವಂಥವು; ಪರಮಾತ್ಮನು ಹಾಗಲ್ಲ, ಅವನು ಅಪ್ರಮೇಯನು.

ಈಗ ಪರಮಾತ್ಮನಲ್ಲಿ ಮೂರು ಗುಣಗಳೂ ಇಲ್ಲವೆಂದು ಹೇಳುವದಕ್ಕೆ ಕಾರಣವೇನೆಂಬುದನ್ನು ತಿಳಿದುಕೊಳ್ಳಬಹುದು. ಮೂರು ಗುಣಗಳೂ ಪರಮಾತ್ಮ ಚೈತನ್ಯದಿಂದ ಬೆಳಗುತ್ತಿರುವವೇ ಹೊರತು ಪರಮಾತ್ಮನಲ್ಲಿ ಅವು ತಮ್ಮ ಸ್ವರೂಪ ದಿಂದ ಇದ್ದುಕೊಂಡಿರುವದಿಲ್ಲ. ನಮಗೆ ಆಲಸ್ಯದಿಂದ ಸ್ವಲ್ಪ ಹೊತ್ತು ನಿದ್ರೆ ಬಂದಿದ್ದು ಆ ಮೇಲೆ ಎಚ್ಚರವಾಗಿ ಚಟುವಟಿಕೆಯಿಂದ ಓಡಾಡಿದರೆ, ಆಮೇಲೆ ನಾವು ಯಾವದಾದರೂ ಶಾಸ್ತ್ರವನ್ನು ಓದಿ ಅದರಿಂದಾದ ಉತ್ತಮವಾದ ತಿಳಿವಳಿಕೆ ಯಿಂದ ಮನಸ್ಸಿಗೆ ಶಾಂತಿಯನ್ನೂ ಸುಖವನ್ನೂ ಸಂಪಾದಿಸಿಕೊಂಡರೆ, ಮೂರು ಗುಣಗಳ ಕಾರ್ಯವೂ ನಮ್ಮ ಮನಸ್ಸಿನಲ್ಲಿ ಕ್ರಮಕ್ರಮವಾಗಿ ತೋರಿಕೊಂಡಂತೆ ಆಗುವದಲ್ಲವೆ? ಆಗ ಈ ಮೂರು ಗುಣಗಳ ಕಾರ್ಯದಲ್ಲಿ ಒಂದಾದರೂ ನಮ್ಮ ಸಾಕ್ಷಿಚೈತನ್ಯದ ಮೇಲೆ ಆಯಿತೆಂದು ಹೇಳಬಹುದೆ? ಎಂದಿಗೂ ಇಲ್ಲ.

ಗುಣಗಳು ಒಂದೊಂದಾಗಿ ತೋರಿಕೊಂಡದ್ದು, ಅವುಗಳ ಒಂದು ತೋರದೆ ಹೋಗುತ್ತಲೂ ಮತ್ತೊಂದು ತೋರಿಕೊಂಡದ್ದು- ಇದೆಲ್ಲವನ್ನೂ ಬೆಳಗುತ್ತಿದ್ದ ಆ ಚೈತನ್ಯದಲ್ಲಿ ಅವುಗಳಲ್ಲಾದ ಮಾರ್ಪಾಡು ಎಳ್ಳಷ್ಟೂ ಆಯಿತೆಂದು ಹೇಳುವದ ಕ್ಕಿಲ್ಲ. ಏಕೆಂದರೆ ಹಾಗೆ ಏನಾದರೂ ಮಾರ್ಪಾಡು ಆಗಿದ್ದರೆ, ಆ ಮಾರ್ಪಾಡನ್ನು ಅರಿಯುವದಕ್ಕೆ ಮತ್ತೊಂದು ಚೈತನ್ಯವೇ ಇರುವದಿಲ್ಲವಾದ್ದರಿಂದ ಆ ಮಾರ್ಪಾಡು ನಮಗೆ ತಿಳಿಯುವದಕ್ಕೇ ಅವಕಾಶವಿರುತ್ತಿರಲಿಲ್ಲ. ಹೀಗೆ ಮೂರುಗುಣಗಳೂ ಯಾವ ಚೈತನ್ಯದ ಬೆಳಕಿನಿಂದ ತೋರಿಕೊಳ್ಳುತ್ತಿರುವವೋ, ಆ ಚೈತನ್ಯದ ಸ್ವರೂಪವಾಗಿರುವ ಪರಮಾತ್ಮನಾದ ಗಣೇಶನಲ್ಲಿ ಯಾವ ಗುಣಗಳೂ ಇರುವದಿಲ್ಲವೆಂದು ಸಿದ್ಧವಾಯಿತು.

ಹೀಗೆ ಪರಮಾರ್ಥದೃಷ್ಟಿಯಿಂದ ಪರಮಾತ್ಮನಲ್ಲಿ ಯಾವ ಗುಣವೂ ಇಲ್ಲವಾದರೂ ವ್ಯವಹಾರದಲ್ಲಿ ಯಾರು ಸಾತ್ತ್ವಿಕರೋ ಅಂಥವರ ಬುದ್ಧಿಗೆ ಪರಮಾತ್ಮತತ್ತ್ವವು ಹೊಳೆಯುವದು. ಇದೂ ಅಲ್ಲದೆ, ಲೋಕದಲ್ಲಿ ನಾವು ಮೆಚ್ಚುವ ಸೌಂದರ್ಯ, ಲಾವಣ್ಯ, ಯೌವನ, ಧೈರ್ಯ, ಶೌರ್ಯ, ಕಾರುಣ್ಯ, ಔದಾರ್ಯ, ಧರ್ಮ, ಸತ್ಯ, ಜ್ಞಾನ ಮುಂತಾದ ಎಲ್ಲಾ ಸದ್ಗುಣಗಳೂ ಪರಮಾತ್ಮನ ಅನುಗ್ರಹದಿಂದಲೇ ಉಂಟಾಗಿರುವವು. ಈ ದೃಷ್ಟಿಯಿಂದಪರಮಾತ್ಮನನ್ನು **ಸಗುಣ**ನೆಂದೂ ಹೇಳುವದು ಸರಿಯೆ. ಆದ್ದರಿಂದ ಪರಮಾತ್ಮನ ಪೂರ್ಣಾನುಗ್ರಹವನ್ನು ಸಂಪಾದಿಸಬೇಕೆಂಬುವನು ಈ ಸಗುಣರೂಪವನ್ನು ಯಾವಾಗಲೂ ಆರಾಧಿಸುತ್ತಿರಬೇಕು.

**೨**

**ಯತಶ್ಚಾವಿರಾಸೀಜ್ಜಗತ್ಸರ್ವಮೇತತ್**
**ತಥಾಬ್ಜಾಸನೋ ವಿಶ್ವಗೋ ವಿಶ್ವಗೋಪ್ತಾ ।**
**ತಥೇನ್ದ್ರಾದಯೋ ದೇವಸಙ್ಘಾ ಮನುಷ್ಯಾಃ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ** :-ಯಾವಾತನಿಂದ ಈ ಜಗತ್ತೆಲ್ಲವೂ ಹೊರತೋರಿಕೊಂಡಿರುವದೋ, ಬ್ರಹ್ಮನೂ, ಎಲ್ಲವನ್ನೂ ವ್ಯಾಪಿಸಿಕೊಂಡು ಎಲ್ಲವನ್ನೂ ಕಾಪಾಡುತ್ತಿರುವ ವಿಷ್ಣುವೂ

ಯಾವಾತನಿಂದಲೇ ಆಗಿರುವರೋ, ಮತ್ತು ಇಂದ್ರನೇ ಮುಂತಾದ ದೇವಗಣಗಳೂ ಮನುಷ್ಯರೂ ಯಾವಾತನಿಂದಲೇ ಆಗಿರುವರೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

# ವಿವರಣೆ

## ಯತಶ್ಚಾವಿರಾಸೀಜ್ಜಗತ್ಸರ್ವಮೇತತ್

ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ನಾವು ಕಂಡು ಕೇಳಿ ಊಹಿಸಿ ತಿಳಿಯುವ ಈ ಜಗತ್ತಿನಲ್ಲಿ ಶಕ್ತಿಯಿಂದಲೂ ಯೋಗ್ಯತೆಯಿಂದಲೂ ಆಗಿರುವ ತಾರತಮ್ಯದಿಂದ ಕೂಡಿದ ಅನಂತಜೀವರುಗಳೂ ಅವರ ಕಾರ್ಯಕ್ಕೆ ಕ್ಷೇತ್ರವಾದ ಭೌತಿಕಪ್ರಪಂಚವೂ ಇರುವವು. ಜೀವರು ಬಗೆಬಗೆಯ ಕೆಲಸಗಳನ್ನು ಮಾಡಿ ಅವುಗಳ ಫಲವಾಗಿ ಹಲವು ಪರಿಯಿಂದ ಸುಖದುಃಖಗಳನ್ನು ಉಣ್ಣುತ್ತಾ ಇರುವರು. ಜಡವಸ್ತುಗಳು ಹುಟ್ಟುವದು, ಬೆಳೆಯುವದು, ಮಾರ್ಪಡುವದು, ಸೊರಗುವದು, ಕೆಲವು ಕಾಲದ ಮೇಲೆ ನಾಶವಾಗುವದು- ಎಂಬ ಬೇರೆ ಬೇರೆ ಅವಸ್ಥೆಗಳನ್ನು ಪಡೆಯುತ್ತಿರುವವು. ಇವುಗಳಿಂದ ಸುಖವನ್ನು ಪಡೆಯಬೇಕೆಂಬ ಆಸೆಯಿಂದ ಹರಿದಾಡುತ್ತಿರುವ ಜೀವರಲ್ಲಿ, ಆಗಲೆ ಹೇಳಿರುವಂತೆ, ಕೆಲವರು ದೇವತೆಗಳು, ಕೆಲವರು ಮನುಷ್ಯರು, ಕೆಲವರು ಮೂಕಜಂತುಗಳು, ಕೆಲವರು ಸ್ಥಾವರಪ್ರಾಣಿಗಳು. ಇವರಲ್ಲಿ ಮನುಷ್ಯನು ತನ್ನ ಪ್ರಯತ್ನದಿಂದ ತನಗಿಂತ ಕೀಳಾಗಿರುವ ಜೀವರನ್ನು ತನ್ನ ವಶಕ್ಕೆ ತೆಗೆದುಕೊಂಡು, ತನಗಿಂತಲೂ ಮೇಲೆನಿಸಿರುವ ದೇವತೆಗಳನ್ನು ಆರಾಧನೆಯಿಂದ ಒಲಿಸಿಕೊಂಡು, ಎಲ್ಲರಿಗಿಂತಲೂ ಹೆಚ್ಚಿನ ಸುಖವನ್ನು ಕೊಳ್ಳೆಹೊಡೆಯಬೇಕೆಂದು ತವಕಿಸುತ್ತಿರುವನು. ಇಂಥ **ಜಗತ್ತೆಲ್ಲವೂ ಆ ಪರಮಾತ್ಮನಿಂದಲೇ ಹೊರತೋರಿರುವದು** ಎಂದ ಮೇಲೆ ಆತನ ಅಧೀನವಲ್ಲದ್ದು ಮತ್ತೆ ಯಾವದಿರುವದು?

## ತಥಾಬ್ಜಾಸನಃ

ಈ ಜಗತ್ತನ್ನು ಸೃಷ್ಟಿಮಾಡುವವನು ಬ್ರಹ್ಮನೆಂದು ಹೇಳುವದು ವಾಡಿಕೆ. ಆತನು ಈ ಪೃಥ್ವಿಯೆಂಬ ಕಮಲದಲ್ಲಿ ಮೇರುಪರ್ವತವೆಂಬ ಕರ್ಣಿಕೆಯ ಮೇಲೆ ಕುಳಿತಿರುವನೆಂದು ಪುರಾಣಗಳು ಬಣ್ಣಿಸುವವು. ಋಗ್ವೇದ, ಯಜುರ್ವೇದ,

ಸಾಮವೇದ, ಅಥರ್ವವೇದ - ಎಂಬ ನಾಲ್ಕು ವೇದಗಳು ಆತನ ನಾಲ್ಕು ಮುಖಗಳಿಂದ ಹೊರಟು ಬಂದಿರುವವು. ಈ ವೇದಗಳು ಪ್ರಪಂಚದಲ್ಲಿರುವ ಸಕಲಶಾಸ್ತ್ರಗಳಿಗೂ ಕಲೆಗಳಿಗೂ ಮೂಲವಾಗಿರುವವು. ಬ್ರಹ್ಮನೆಂಬ ಮಾತಿಗೆ ದೊಡ್ಡವನೆಂದು ಅರ್ಥ. ಲೋಕದಲ್ಲಿರುವ ಸಕಲ ಪ್ರಾಣಿಗಳನ್ನೂ ಸೃಷ್ಟಿಸಿ, ಅವರಿಗೆ ತಿಳಿವಳಿಕೆಯನ್ನು ಕೊಡುವ ವೇದಶಾಸ್ತ್ರಗಳನ್ನು ಕೊಟ್ಟು, ಅವರು ಮಾಡುವ ಕರ್ಮಗಳಿಗೆ ತಕ್ಕ ಫಲಗಳನ್ನು ನಿರ್ಮಿಸುವ ಬ್ರಹ್ಮನಿಗಿಂತ ದೊಡ್ಡವರು ಮತ್ತೆಯಾರಿರುವರು? - ಎಂದು ನಮಗೆ ತೋರುವದು. ಆದರೂ ಈ **ಬ್ರಹ್ಮನೂ ಪರಮಾತ್ಮನಿಂದಲೇ** ಉಂಟಾಗಿರುವನು. ಪರಮಾತ್ಮನೇ ಈತನಿಗೆ ವೇದಗಳನ್ನು ಅಂತಃಕರಣದಲ್ಲಿ ಹೊಳೆಯುವಂತೆ ಮಾಡುವನು - ಎಂದು ವೇದಗಳಲ್ಲಿ ಹೇಳಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಬ್ರಹ್ಮವೆಂಬ ಹೆಸರು ಗಣೇಶನಿಗಲ್ಲದೆ ಮತ್ತೆ ಯಾರಿಗೆ ಸಲ್ಲುವದು?

## ವಿಶ್ವಗೋ ವಿಶ್ವಗೋಪ್ತಾ

ಇಷ್ಟೇ ಅಲ್ಲ. ಜಗತ್ತನ್ನೆಲ್ಲ ವ್ಯಾಪಿಸಿಕೊಂಡು ಅಂತರ್ಯಾಮಿಯಾಗಿ ಕಾಪಾಡುತ್ತಾನೆಂದು ಪ್ರಸಿದ್ಧನಾಗಿರುವ **ವಿಷ್ಣುವೂ ಇವನಿಂದಲೇ** ಆಗಿರುವನು. ಈ ಗಣೇಶನೇ ಸೃಷ್ಟಿಮಾಡುವಾಗ ಬ್ರಹ್ಮನೆನಿಸಿಕೊಂಡು, ಜಗತ್ತನ್ನು ಕಾಪಾಡುವಾಗ ವಿಷ್ಣುವೆನಿಸಿರುವನೇ ಹೊರತು, ಇವನಿಗಿಂತ ಬೇರೆಯಾಗಿ ಬ್ರಹ್ಮನಾಗಲಿ ವಿಷ್ಣು ವಾಗಲಿ ಇರುವದಿಲ್ಲ. ಆದ್ದರಿಂದಲೇ ಸ್ವಗತಭೇದವಿಲ್ಲದ ಈ ಪರಮಾತ್ಮನಲ್ಲಿ ಬ್ರಹ್ಮವಿಷ್ಣುರುದ್ರರೆಂಬ ತ್ರಿಮೂರ್ತಿಗಳು ತೋರುತ್ತಿರುವರೆಂದು ನಾವು ಹಿಂದೆ ಹೇಳಿದ್ದು.

## ತಥೇನ್ದ್ರಾದಯೋ ದೇವಸಙ್ಘಾ ಮನುಷ್ಯಾಃ

ಹೀಗೆ ಜಗತ್ತನ್ನೆಲ್ಲ ಸೃಷ್ಟಿಸುವ ಬ್ರಹ್ಮನೂ ಕಾಪಾಡುವ ವಿಷ್ಣುವೂ ಪರಮಾತ್ಮ ನಿಂದಾಗಿರುವರೆನ್ನುವಾಗ - ಇಂದ್ರನೇ ಮೊದಲಾದ ಮಿಕ್ಕ ದೇವತೆಗಳ ವಿಷಯ ವನ್ನು ಹೇಳುವದೇನಿದೆ? ದೊಡ್ಡ ಚಕ್ರವರ್ತಿಯ ರಾಜ್ಯದಲ್ಲಿರುವ ಸಾಮಂತ ರಾಜರ ಹಾಗೆ, ಅವರು ಇದ್ದುಕೊಂಡು ಆತನ ಅನುಗ್ರಹದಿಂದಲೇ ಉಳಿದ ಜೀವರಿಗೆ ಪೂಜ್ಯರೆನಿಸಿಕೊಂಡಿರುವರು. ತಾಯಿಬೇರೇ, ಬುಡವೆಂದೂ ಕೊಂಬೆ ಗಳೆಂದೂ ರೆಂಬೆಗಳೆಂದೂ ಕವಲುಕವಲಾಗಿ ತೋರುವಂತೆ, ಈತನೇ **ಸಕಲ**

**ದೇವತೆಗಳ** ರೂಪಿನಿಂದಲೂ ಮನುಷ್ಯರ ರೂಪಿನಿಂದಲೂ ತೋರಿಕೊಳ್ಳುತ್ತಿರುವನು.

೩

**ಯತೋ ವಹ್ನಿಭಾನೂ ಭವೋ ಭೂರ್ಜಲಂ ಚ**
**ಯತಃ ಸಾಗರಾಶ್ಚನ್ದ್ರಮಾ ವ್ಯೋಮ ವಾಯುಃ ।**
**ಯತಃ ಸ್ಥಾವರಾ ಜಙ್ಗಮಾ ವೃಕ್ಷಸಙ್ಘಾಃ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ** :- ಯಾವಾತನಿಂದ ಅಗ್ನಿಯೂ ಸೂರ್ಯನೂ ಶಿವನೂ ಹುಟ್ಟಿರುವರೋ, ಭೂಮಿಯೂ ಜಲವೂ ಯಾವಾತನಿಂದಲೇ ಆಗಿರುವವೋ, ಸಮುದ್ರಗಳು, ಚಂದ್ರನು, ಆಕಾಶವು, ವಾಯು - ಇವುಗಳೂ ಯಾವಾತನಿಂದಲೇ ಆಗಿರುವವೋ, ಸ್ಥಾವರ ಜಂಗಮ ಪ್ರಾಣಿಗಳೆಲ್ಲ ಯಾವಾತನಿಂದಲೇ ಆಗಿರುವವೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ , ಯಾವಾಗಲೂ ಭಜಿಸುತ್ತೇವೆ.

## ವಿವರಣೆ

ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ - ಎಂಬಿವು ಐದು **ಮಹಾಭೂತಗಳೆನಿಸುವವು.** ಇವುಗಳಲ್ಲಿ ಒಂದೊಂದಕ್ಕೆ ಒಂದೊಂದು ವಿಶೇಷ ಗುಣವಿರುವದು. ಹಿಂದು ಹಿಂದಿನ ಭೂತದ ಗುಣಗಳು ಮುಂದುಮುಂದಿನ ಭೂತದಲ್ಲಿ ಇದ್ದುಕೊಂಡೇ ಇರುವವು. ಹೇಗೆಂದರೆ ಆಕಾಶದಲ್ಲಿ ಶಬ್ದವು, ವಾಯುವಿನಲ್ಲಿ ಶಬ್ದ ಸ್ಪರ್ಶಗಳು, ತೇಜಸ್ಸಿನಲ್ಲಿ ಶಬ್ದ ಸ್ಪರ್ಶರೂಪಗಳು, ಅಪ್ಪಿನಲ್ಲಿ ಶಬ್ದಸ್ಪರ್ಶರೂಪರಸಗಳು, ಪೃಥ್ವಿಯಲ್ಲಿ ಶಬ್ದ ಸ್ಪರ್ಶರೂಪರಸಗಂಧಗಳು - ಹೀಗೆ ಹೆಚ್ಚು ಹೆಚ್ಚು ಗುಣಗಳಿಂದ ಈ ಭೂತಗಳು ಕೂಡಿರುವದರಿಂದ ಹೆಚ್ಚು ಹೆಚ್ಚು ಸ್ಥೂಲವಾಗಿರುವವು, ಎಂದರೆ ಇಂದ್ರಿಯಕ್ಕೆ ಬೇಗನೆ ತಿಳಿಯುವಂತೆ ಇರುವವು. ಬಯಲು, ಗಾಳಿ, ಬೆಂಕಿ, ನೀರು, ನೆಲ- ಎಂದು ತೋರುವ ಐದು ವಸ್ತುಗಳೇ ಈ ಭೂತಗಳಲ್ಲ ; ಇಂದ್ರಿಯಗಳು ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು- ಇವುಗಳಲ್ಲಿದ್ದುಕೊಂಡು ಹೊರಗಿನ ಜ್ಞಾನವನ್ನು ನಮಗೆ ತಿಳಿಸುವವಷ್ಟೆ. ಈ

ಜ್ಞಾನೇಂದ್ರಿಯಗಳಿಗೆ ಗೋಚರವಾಗುವ ಪ್ರಪಂಚಭಾಗಗಳೇ ಮಹಾಭೂತಗಳು. ಹೊರಗಿನ ಪ್ರಪಂಚವೆಲ್ಲ ಈ ಭೂತಗಳ ಕಾರ್ಯವೇ. ಇಂಥ ಭೌತಿಕಪ್ರಪಂಚವೂ ಅದರಲ್ಲಿ ನಮಗೆ ತೋರುವ ಸೂರ್ಯ, ಚಂದ್ರ, ನಕ್ಷತ್ರ- ಮುಂತಾಗಿ ಕಾಣುವ ಅಂತರಿಕ್ಷದ ಜ್ಯೋತಿಗಳೂ ಸಮುದ್ರ, ಪರ್ವತ, ನದಿ, ಬಯಲು- ಮುಂತಾಗಿ ಕಾಣುವ ಭೂಭಾಗಗಳೂ ಸ್ಥಾವರ, ಜಂಗಮ- ಎಂಬ ಎರಡು ದೊಡ್ಡ ಪಂಗಡಗಳಾಗಿ ಕಾಣುವ ಭೂಲೋಕದ ಪ್ರಾಣಿಗಳೂ ಈ ಗಣೇಶನಿಂದಲೇ ಆಗಿರುವವು.

ಇಷ್ಟೇ ಅಲ್ಲ, ಹಿಂದಿನ ಶ್ಲೋಕದ ವಿವರಣೆಯಲ್ಲಿ ಹೇಳಿರುವಂತೆ ಸೃಷ್ಟಿ ಸ್ಥಿತಿಗಳ ನಿಮಿತ್ತದಿಂದ ಈತನು ಬ್ರಹ್ಮನೆಂದೂ ವಿಷ್ಣುವೆಂದೂ ತೋರಿಕೊಳ್ಳುವಂತೆ ಪ್ರಲಯಮಾಡುವದೆಂಬ ನಿಮಿತ್ತದಿಂದ ಈತನೇ ಶಿವನಾಗಿರುವನು. ಹೀಗೆ ಗಣೇಶನೇ ಜಗದ್ರೂಪನಾಗಿಯೂ, ಅದರ ಸೃಷ್ಟಿಸ್ಥಿತಿನಾಶಗಳಿಗೆ ಕಾರಣರಾದ ಬ್ರಹ್ಮವಿಷ್ಣುಶಿವರ ಸ್ವರೂಪನಾಗಿಯೂ ಇರುವದರಿಂದ ಈತನನ್ನು ಯಾವಾಗಲೂ ನಮಸ್ಕರಿಸುತ್ತಾ ಯಾವಾಗಲೂ ಭಜಿಸುತ್ತಿರಬೇಕು.

೪

**ಯತೋ ದಾನವಾಃ ಕಿನ್ನರಾ ಯಕ್ಷಸಙ್ಘಾಃ**
**ಯತಶ್ಚಾರಣಾ ವಾರಣಾ ಃ ಶ್ವಾಪದಾಶ್ಚ ।**
**ಯತಃ ಪಕ್ಷಿಕೀಟಾ ಯತೋ ವೀರುಧಶ್ಚ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ :-** ಯಾವಾತನಿಂದ ದಾನವರು, ಕಿನ್ನರರು, ಯಕ್ಷಗಣಗಳು, ಚಾರಣರು - ಇವರೆಲ್ಲ ಉಂಟಾಗಿರುವರೋ, ಆನೆಗಳೂ ಹಿಂಸ್ರಮೃಗಗಳೂ ಯಾವಾತನಿಂದ ಆಗಿರುವವೋ, ಯಾವಾತನಿಂದ ಹಕ್ಕಿಗಳೂ ಹುಳುಹುಪ್ಪಟೆಗಳೂ ಆಗಿರುವವೋ ಯಾವಾತನಿಂದ ಬಳ್ಳಿಗಳೂ ಆಗಿರುವವೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ. ಯಾವಾಗಲೂ ಭಜಿಸುತ್ತೇವೆ.

# ವಿವರಣೆ

ಗಣೇಶನಿಂದಲೇ ಇಂದ್ರಾದಿದೇವತೆಗಳೂ ಆಗಿರುವರಲ್ಲದೆ ಇತರ **ಗಣದೇವತೆಗಳೂ ದೇವಯೋನಿಗಳೂ ಈತನಿಂದಲೇ** ಆಗಿರುವರು. ಎರಡನೆಯ ಶ್ಲೋಕದಲ್ಲಿ 'ದೇವಸಂಘಗಳು' ಎಂಬ ಮಾತಿನಲ್ಲಿ ಹನ್ನೆರಡು ಜನ ಆದಿತ್ಯರು, ಹತ್ತು ಮಂದಿ ವಿಶ್ವೇದೇವತೆಗಳು, ಎಂಟು ಜನ ವಸುಗಳು, ಮೂವತ್ತಾರು ತುಷಿತರು, ಅರವತ್ತು ನಾಲ್ಕು ಆಭಾಸ್ವರರು, ನಲವತ್ತೊಂಬತ್ತು ಅನಿಲರು, ಇನ್ನೂರಿಪ್ಪತ್ತು ಮಹಾರಾಜಿಕರು, ಹನ್ನೆರಡು ಮಂದಿ ಸಾಧ್ಯರು, ಹನ್ನೊಂದು ಮಂದಿ ರುದ್ರರು - ಈ ಗಣದೇವತೆಗಳೂ ಸೇರಿರುವರು. ಈ ಶ್ಲೋಕದಲ್ಲಿ ಹೇಳಿರುವ ದಾನವ, ಕಿನ್ನರ, ಯಕ್ಷ- ಎಂಬ ಮಾತುಗಳಿಂದ ವಿದ್ಯಾಧರರು, ಅಪ್ಸರರು, ರಾಕ್ಷಸರು, ಗಂಧರ್ವರು, ಪಿಶಾಚರು, ಗುಹ್ಯಕರು, ಸಿದ್ಧರು - ಈ ದೇವಯೋನಿಗಳನ್ನೂ ತೆಗೆದುಕೊಳ್ಳಬೇಕು.

**ಸ್ಥಾವರಜಂಗಮಪ್ರಾಣಿಗಳೆಲ್ಲವೂ ಗಣೇಶನಿಂದಲೇ** ಆಗಿರುವವೆಂದು ಹಿಂದಿನ ಶ್ಲೋಕದಲ್ಲಿ ಹೇಳಿದೆಯಷ್ಟೆ ; ಊರಲ್ಲಿ ಸಾಕುವ ದನ, ಕರು, ಆಡು, ಕುರಿ, ಎಮ್ಮೆ, ಕೋಣ, ಕತ್ತೆ, ಕುದುರೆ, ನಾಯಿ, ಬೆಕ್ಕು- ಮುಂತಾದ ಸಾಧು ಮೃಗಗಳು ; ಕೋಳಿ, ಗಿಣಿ, ಗೀಜಗ ಮುಂತಾದ ಹಕ್ಕಿಗಳು - ಇವನ್ನೇ ಅಲ್ಲದೆ ಕಾಡಿನಲ್ಲಿ ಸಂಚರಿಸುವ ಆನೆ, ಒಂಟೆ, ಹುಲಿ, ಕರಡಿ, ಕಿರುಬ - ಮುಂತಾದ ಕ್ರೂರಮೃಗಗಳನ್ನೂ ರಣಹದ್ದು, ಗಿಡಗ, ಡೇಗೆ - ಮುಂತಾದ ಪಕ್ಷಿಗಳನ್ನೂ ಹಾವು, ಹಲ್ಲಿ- ಮುಂತಾದ ಉರಗಮನಿಗಳನ್ನೂ ಚಿಮ್ಮಂಡಿ, ಚಿಪ್ಪಟ್ಟೆ, ಸೊಳ್ಳೆ, ಚಿಗಟ, ತಗಣೆ, ಹೇನು, ಕೂರೆ - ಮುಂತಾದ ಹುಳು ಹುಪ್ಪಟೆಗಳನ್ನೂ ಜನರು ಬೆಳೆಯುವ ಮರಗಿಡಪೈರುಪಚ್ಚೆಗಳನ್ನೇ ಅಲ್ಲದೆ ಕಾಡಿನಲ್ಲಿ ತಮ್ಮಷ್ಟಕ್ಕೆತಾವೇ ಬೆಳೆಯುವ ಎಲ್ಲಾ ಬಗೆಯ ಮರಗಿಡಬಳ್ಳಿಗಳನ್ನೂ ಈ ಎರಡು ಪಂಗಡಗಳಲ್ಲಿ ಸೇರಿಸಿಕೊಳ್ಳಬೇಕು. ದೊಡ್ಡದು, ಸಣ್ಣದು, ಕೆಟ್ಟದು, ಒಳ್ಳೆಯದು, ಗೊತ್ತಿರುವದು, ಗೊತ್ತಿಲ್ಲದ್ದು - ಎಂಬ ಯಾವ ಭೇದವೂ ಇಲ್ಲದೆ ಎಲ್ಲಾ ಬಗೆಯ ಪ್ರಾಣಿಗಳನ್ನೂ ಸೇರಿಸಿ, ''ಇದೆಲ್ಲವೂ ಗಣೇಶನಿಂದಲೇ ಆಗಿದೆ, ಇದೆಲ್ಲವೂ ಗಣೇಶನೇ'' ಎಂದು ಭಾವಿಸಬೇಕೆಂಬುದು ಶ್ಲೋಕದ ಒಟ್ಟು ತಾತ್ಪರ್ಯವು.

೫

**ಯತೋ ಬುದ್ಧಿರಜ್ಞಾನನಾಶೋ ಮುಮುಕ್ಷೋಃ -**
**ರ್ಯತಃ ಸಂಪದೋ ಭಕ್ತಸಂತೋಷದಾಃ ಸ್ಯುಃ ।**
**ಯತೋ ವಿಘ್ನನಾಶೋ ಯತಃ ಕಾರ್ಯಸಿದ್ಧಿಃ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ:** - ಯಾವಾತನಿಂದ ಬುದ್ಧಿಯೂ ಮುಮುಕ್ಷುವಾದವನಿಗೆ ಅಜ್ಞಾನದ ನಾಶವೂ ಆಗುವವೋ, ಯಾವಾತನಿಂದ ಭಕ್ತರಿಗೆ ಸಂತೋಷವನ್ನುಂಟು ಮಾಡುವ ಸಂಪತ್ತುಗಳು ಉಂಟಾಗುವವೋ, ಯಾವಾತನಿಂದ ವಿಘ್ನಗಳು ನಾಶವಾಗುವವೋ, ಯಾವಾತನಿಂದ ಕಾರ್ಯಗಳು ಕೈಗೂಡುವವೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ , ಯಾವಾಗಲೂ ಭಜಿಸುತ್ತೇವೆ.

## ವಿವರಣೆ

### ಯತೋ ಬುದ್ಧಿರಜ್ಞಾನನಾಶೋ ಮುಮುಕ್ಷೋಃ

ಪರಮಾತ್ಮನಾದ ಗಣೇಶನು ಬಗೆಬಗೆಯಾಗಿ ತೋರುತ್ತಿರುವ ಈ ಜಗತ್ತನ್ನೆಲ್ಲ ಸೃಷ್ಟಿಸಿರುವದು ಮಾತ್ರವೇ ಅಲ್ಲದೆ, ಇದರಲ್ಲಿರುವ ಜೀವರುಗಳ ಬುದ್ಧಿಯಲ್ಲಿ ಪ್ರವೇಶಿಸಿ ಅವರಿಗೆ ಬೇರೆ ಬೇರೆ ಪ್ರವೃತ್ತಿಯನ್ನೂ ಉಂಟುಮಾಡುತ್ತಿರುವನು. ಸೂಕ್ಷ್ಮ ವಿಷಯಗಳನ್ನು ಅರಿತುಕೊಳ್ಳುವ ಬುದ್ಧಿಯನ್ನೂ ಆತನೇ ಕೊಡುವನು. ಆತನನ್ನು ಎಡೆಬಿಡದೆ ಪ್ರೇಮದಿಂದ ಭಜಿಸುತ್ತಿರುವವರಿಗೆ ಒಳ್ಳೆಯ ಬುದ್ಧಿಯೂ ಎಂದರೆ ಸನ್ಮಾರ್ಗದಲ್ಲಿ ಪ್ರವೃತ್ತಿಯೂ ಮುಮುಕ್ಷುವಾದವನಿಗೆ ಅಜ್ಞಾನನಾಶವೂ ಆತನ ಅನುಗ್ರಹದಿಂದಲೇ ಉಂಟಾಗುತ್ತಿರುವದು.

### ಯತಃ ಸಂಪದಃ

ಅಂಥ ಬುದ್ಧಿಯ ಬಲದಿಂದಲೇ ಆತನು ಅನುಗ್ರಹಿಸಿದ ಸಂಪತ್ತುಗಳು ಭಕ್ತರಿಗೆ ತೃಪ್ತಿಯನ್ನುಂಟುಮಾಡುತ್ತಿರುವವು. ಯಾರು ಪರಮಾತ್ಮನ ಭಕ್ತರಲ್ಲದೆ, ಹೊರಗಿನ ವಿಷಯಗಳಲ್ಲಿ ನೆಟ್ಟ ಪ್ರೇಮದಿಂದ ಅವುಗಳಿಗಾಗಿಯೇ ಹೆಣಗಾಡುತ್ತಿರುವರೋ ಅವರಿಗೆ ಎಷ್ಟು ಸಂಪತ್ತು ಬಂದರೂ ಉಪ್ಪುನೀರು ಕುಡಿದವರಿಗೆ

ನೀರಡಿಕೆಯು ಮತ್ತಷ್ಟು ಹೆಚ್ಚಾಗುವಂತೆ, ಮತ್ತೂ ಕೆಲವು ವಿಷಯಗಳನ್ನು ಸಂಪಾದಿಸಿಕೊಳ್ಳಬೇಕೆಂಬ ಹಂಬಲಿಕೆಯು ಹೆಚ್ಚಾಗುತ್ತಾ ಹೋಗುವದರಿಂದ ಇಲ್ಲಿಗೆ ಸಾಕೆಂಬ ಸಂತುಷ್ಟಿಯು ಎಂದಿಗೂ ಆಗುವದಿಲ್ಲ. ಶ್ರೀ ಗಣೇಶನ ಭಕ್ತರ ವಿಷಯವು ಹಾಗಲ್ಲ; ಅವರಿಗೆ ಎಷ್ಟು ದೊರೆತರೆ ಅಷ್ಟರಿಂದ ತೃಪ್ತಿಯಾಗುವದು.

### ಯತೋ ವಿಘ್ನನಾಶೋ ಯತಃ ಕಾರ್ಯಸಿದ್ಧಿಃ

ಇದೂ ಅಲ್ಲದೆ ಆ ಭಕ್ತರು ಸ್ವಾರ್ಥತೆಯಿಂದ ಯಾವ ಕಾರ್ಯದಲ್ಲಿಯೂ ತೊಡಗುವದಿಲ್ಲವಾದ್ದರಿಂದ ಆ ಪರಮೇಶ್ವರನ ದಯೆಯಿಂದ ಅವರು ಕೈ ಹಾಕುವ **ಕೆಲಸದಲ್ಲೆಲ್ಲ ಅವರಿಗೆ ಜಯವೇ** ಆಗುವದು. ಅವರಿಗೆ ಎಂದಿಗೂ ದಾರಿಯಲ್ಲಿ ಅಡ್ಡಿಗಳೆಂಬುವೇ ತಲೆದೋರುವದಿಲ್ಲ. 'ವಿಘ್ನೇಶ್ವರ'ನೆಂದೂ 'ಸಿದ್ಧಿವಿನಾಯಕ'ನೆಂದೂ ಅನ್ವರ್ಥನಾಮವುಳ್ಳ ಆತನ ಅನುಗ್ರಹಕ್ಕೆ ಪಾತ್ರರಾದವರಿಗೆ ವಿಘ್ನಗಳೆಲ್ಲಿಯವು? ಅವರ ಕಾರ್ಯವು ಸಿದ್ಧಿಯಾಗದೆ ಏನು ಮಾಡೀತು ?

**೬**

**ಯತಃ ಪುತ್ರಸಂಪದ್ಯತೋ ವಾಂಛಿತಾರ್ಥೋ**
**ಯತೋಽಭಕ್ತವಿಘ್ನಾಸ್ತಥಾನೇಕರೂಪಾಃ ।**
**ಯತಃ ಶೋಕಮೋಹೌ ಯತಃ ಕಾಮ ಏವಂ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ** :- ಯಾವಾತನಿಂದ ಪುತ್ರಸಂಪತ್ತು ಉಂಟಾಗುವದೋ, ಮನಸ್ಸಿನಲ್ಲಿರುವ ಇಷ್ಟಾರ್ಥವೂ ನೆರವೇರುವದೋ, ಯಾವಾತನ ಭಕ್ತರಲ್ಲದವರಿಗೆ ಅನೇಕ ವಿಧವಾದ ವಿಘ್ನಗಳು ಉಂಟಾಗುವವೋ, ಯಾವಾತನಿಂದ ಶೋಕಮೋಹಗಳೂ ಮತ್ತು ಕಾಮವೂ ಉಂಟಾಗುವವೋ - ಆ ಗಣೇಶನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

## ವಿವರಣೆ

### ಯತಃ ಪುತ್ರಸಂಪತ್

ಗಣೇಶನ ಭಕ್ತರಾದವರಿಗೆ ಆತನ ಅನುಗ್ರಹದಿಂದ **ಪುತ್ರಸಂಪತ್ತೂ** ಆಗುವದು, ಅವರ ಅಭೀಷ್ಟವೂ ನೆರವೇರುವದು. ಗಣಪತಿಯ ಹೆಸರನ್ನು ಒಂದು

ದಿನವೂ ನಾಲಗೆಯಲ್ಲಿ ಉಚ್ಚರಿಸದವರಿಗೆ ಕೂಡ ಬೇಕಾದಷ್ಟು ಮಕ್ಕಳು ಆಗುತ್ತಿರುವಾಗ, ಪುತ್ರಸಂಪತ್ತೇನು ಹೆಚ್ಚಿನದೆಂದು ಯೋಚಿಸಬಾರದು. ಸುಮ್ಮನೆ ಮಕ್ಕಳಾದ ಮಾತ್ರದಿಂದ ಪುತ್ರಸಂಪತ್ತಾದಂತೆ ಆಗಲಿಲ್ಲ; ವಂಶದ ಹೆಸರನ್ನು ಮುಂದಕ್ಕೆ ತರುವಂಥ, ತಂದೆಗೆ ವಿಧೇಯರಾಗಿದ್ದು ತಮ್ಮ ವಿದ್ಯಾವಿನಯಗಳಿಂದ ಯಾವಾಗಲೂ ಸಂತೋಷವನ್ನು ತರುವ ಮಕ್ಕಳಾದಾಗಮಾತ್ರ ಪುತ್ರಸಂಪತ್ತು ಆದಂತೆ ಆಯಿತು. ಹಾಗಿಲ್ಲದಿದ್ದರೆ ಮಕ್ಕಳಾಗುವದೆಂಬುದೂ ಒಂದು ಬಾಧೆಯೇ ಆಗಿಬಿಡಬಹುದು. ಗಣೇಶನ ಭಕ್ತರಿಗೆಲ್ಲ ಮಕ್ಕಳಾಗುವವೋ ಇಲ್ಲವೋ ಹೇಳುವದಕ್ಕೆ ಬರುವದಿಲ್ಲ; ಆದರೂ ಅವರಿಗೆ ಪುತ್ರಸಂಪತ್ತು ಮಾತ್ರ ತಪ್ಪಿದ್ದಲ್ಲ. ಏಕೆಂದರೆ ಅವರ ಅನುಗ್ರಹವನ್ನು ಸಂಪಾದಿಸಿಕೊಳ್ಳುವದಕ್ಕೆಂದು ಲೋಕದಲ್ಲಿ ಎಷ್ಟೋ ಜನರು ಅವರ ಸೇವೆಯನ್ನು ಮಕ್ಕಳಿಗಿಂತ ಹೆಚ್ಚಾಗಿ ಮಾಡುತ್ತಿರುವರು.

## ಯತೋ ವಾಞ್ಛಿತಾರ್ಥೋ

ಇದೂ ಅಲ್ಲದೆ ಆ ಪರಮಾತ್ಮನ ಭಕ್ತರು ಏನು ಮನಸ್ಸಿನಲ್ಲಿ ಯೋಚಿಸಿಕೊಂಡರೆ ಅದು ಆಗುವದು ; ಏಕೆಂದರೆ ಅವರಲ್ಲಿ ಸ್ವಾರ್ಥಪರವಾದ ಯೋಚನೆಗಳು ಯಾವವೂ ಆಗುವದಿಲ್ಲ. ಭಗವಂತನಂತೆಯೇ ಅವರೂ ಲೋಕದ ಕಲ್ಯಾಣವನ್ನೇ ಕೋರುತ್ತಿರುವರಾದ್ದರಿಂದ ಆತನು ಅವರ **ಇಷ್ಟಾರ್ಥಗಳನ್ನು** ಸಂತೋಷದಿಂದ ನೆರವೇರಿಸಿಕೊಡುವನು.

## ಯತೋಽಭಕ್ತವಿಘ್ನಾಃ

ಗಣೇಶನು ಭಕ್ತರಿಗೆ **ಹೇಗೆ ಸಕಲ** ವಿಧವಾದ ಇಷ್ಟಾರ್ಥವನ್ನೂ ಅನುಗ್ರಹಿಸುವನೋ ಅದರಂತೆ **ಭಕ್ತರಲ್ಲದವರಿಗೆ ಅನಿಷ್ಟವನ್ನೂ** ಕೊಡುತ್ತಿರುವನು. ಒಳ್ಳೆಯ ಫಲವನ್ನುಕೊಡುವದಕ್ಕೆ ದೇವರು, ಕೆಟ್ಟ ಫಲವನ್ನು ಕೊಡುವದಕ್ಕೆ ಸೈತಾನನು - ಎಂದು ಎರಡು ಬಗೆಯ ಫಲದಾತೃಗಳು ಇರುವದಿಲ್ಲ ; ಜ್ಞಾನವೂ ಅಜ್ಞಾನವೂ, ವೈರಾಗ್ಯವೂ ಕಾಮವೂ, ಶಾಂತಿಯೂ ರಜಸ್ಸಿನಿಂದ ಹರಿದಾಡುವದೂ, ಸರ್ವರಲ್ಲಿಯೂ ಸಮಬುದ್ಧಿಯೂ ರಾಗದ್ವೇಷಗಳೂ, ಧೈರ್ಯವೂ ಹೆದರಿಕೆಯೂ, ಸುಖವೂ ದುಃಖವೂ - ಎಲ್ಲವೂ ಈ ಒಬ್ಬ ದೇವನಿಂದಲೇ ಪ್ರಾಣಿಗಳಿಗೆ ಆಗುತ್ತಿರುವದು.

**ಯತಃ ಶೋಕಮೋಹೌ ಯತಃ ಕಾಮ ಏವಮ್**

ನಿಜವಾಗಿ ನೋಡಿದರೆ ಆತನು ಭಕ್ತರಿಗಾಗಲಿ ಅಭಕ್ತರಿಗಾಗಲಿ ಯಾವ ಪಕ್ಷಪಾತವನ್ನೂ ತೋರಿಸುವದಿಲ್ಲ. ಮಳೆಯು ಹೊಯ್ಯುವಾಗ ಕೆಳಗೆ ಇರುವ ನೆಲದ ಸ್ವಭಾವವೇನೆಂಬುದನ್ನು ಯೋಚಿಸದೆ ತನ್ನ ಕಾರ್ಯಕ್ಷೇತ್ರಕ್ಕೆ ಸಿಕ್ಕ ನೆಲದ ಮೇಲೆಲ್ಲ ನೀರುಸುರಿಸುವದಾದರೂ, ಆಯಾ ನೆಲದ ಯೋಗ್ಯತೆಗೆ ತಕ್ಕಂತೆಯೇ ಅದರಲ್ಲಿ ಸಸ್ಯವು ಹುಟ್ಟಿ ಬೆಳೆಯುವದಲ್ಲವೆ? ಹಾಗೆಯೆ ಅವರವರ ಕರ್ಮವು ಫಲವನ್ನು ತಪ್ಪದೆ ಕೊಡುವಂತೆ ಪರಮಾತ್ಮನು ಅನುಗ್ರಹಿಸುವನಾದ್ದರಿಂದ ಭಕ್ತರು ಮಾಡುವ ಸತ್ಕರ್ಮಗಳಿಗೆ ಒಳ್ಳೆಯ ಫಲವೂ ಅಭಕ್ತರು ಮಾಡುವ ಅಸತ್ಕರ್ಮಗಳಿಗೆ ಕೆಟ್ಟ ಫಲವೂ ತಾನೇ ಆಗುತ್ತಿರುವದು. ಆತನ ಭಕ್ತರಲ್ಲದವರು ಸಂಸಾರದಲ್ಲಿರುವ ವಿಷಯ ಸುಖವನ್ನೇ ಬಯಸಿ ಅದಕ್ಕೆ ಬೇಕಾಗುವ ಕರ್ಮಗಳನ್ನೇ ಮಾಡುತ್ತಿರುವರು ; ಅಜ್ಞಾನದಿಂದ ಹೀಗೆ ವಿಷಯಗಳಲ್ಲಿಯೇ ಬಿದ್ದು ಹೊರಳಾಡುತ್ತಿರುವ ಅವರಿಗೆ ''ಮಾಡಿದ್ದುಣ್ಣೊ ಮಾರಾಯ'' ಎಂಬಂತೆ ಅಜ್ಞಾನದ ಫಲವಾಗಿ **ಶೋಕಮೋಹಗಳೂ ವಿಷಯಗಳಲ್ಲಿ ಆಸೆಯೂ** ಮತ್ತೆ ಮತ್ತೆ ಬಲವಾಗುತ್ತಿರುವವು. ಹೀಗೆ ಯಾರು ಯಾವದರಲ್ಲಿ ಮನಸ್ಸಿಡುತ್ತಾರೋ ಅವರಿಗೆ ಅಂಥ ಫಲವಾಗುವದೆಂಬುದನ್ನರಿತು ಜಾಣನಾದವನು ಶೋಕಮೋಹಗಳಿಂದ ಕೂಡಿ ತೊಳಲುವ ಸಂಸಾರಗತಿಯನ್ನು ಮೀರುವದಕ್ಕಾಗಿ ಸಕಲ ಸಂಸಾರಕ್ಕೂ ಮೋಕ್ಷಕ್ಕೂ ಅಧಿಪತಿಯಾದ **ಈ ಗಣೇಶನನ್ನು** ಯಾವಾಗಲೂ ನಮಸ್ಕರಿಸುತ್ತಾ ಭಜಿಸುತ್ತಿರಬೇಕು.

೭

**ಯತೋಽನನ್ತಭಕ್ತಿಃ ಸ ಶೇಷೋ ಬಭೂವ**
**ಧರಾಧಾರಣೇಽನೇಕರೂಪೇ ಚ ಶಕ್ತಃ ।**
**ಯತೋಽನೇಕಧಾ ಸ್ವರ್ಗಲೋಕಾ ಹಿ ನಾನಾ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ** :- ಯಾವಾತನಲ್ಲಿ ಅಂತವಿಲ್ಲದ ಭಕ್ತಿಯಿರುವದರಿಂದ ಪ್ರಸಿದ್ಧನಾದ ಶೇಷನು ಭೂಮಿಯನ್ನು ಹೊರುವದಕ್ಕೂ ನಾನಾರೂಪಗಳನ್ನು ಧರಿಸುವದಕ್ಕೂ ಶಕ್ತನಾಗಿರು

ವನೋ, ಯಾವಾತನಿಂದ ಅನೇಕ ವಿಧವಾದ ವಿಚಿತ್ರರೂಪವಾದ ಸ್ವರ್ಗಲೋಕಗಳು ಉಂಟಾಗಿರುವವೋ - ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

## ವಿವರಣೆ

**ಯತೋಽನನ್ತಭಕ್ತಿಃ ಸ ಶೇಷೋ ಬಭೂವ**
**ಧರಾಧಾರಣೇಽನೇಕರೂಪೇ ಚ ಶಕ್ತಃ**

ಭಗವಂತನ ಭಕ್ತರಿಗೆ ಅಸಾಧ್ಯವಾದದ್ದು ಏನೂ ಇರುವದಿಲ್ಲ. ಇದಕ್ಕೆ ಒಂದೇ ಉದಾಹರಣೆಯು ಸಾಕು. ಈ ವಿಸ್ತಾರವಾದ ಭೂಮಿಯು ಗೋಳಾಕಾರವಾಗಿ ಅಂತರಿಕ್ಷದಲ್ಲಿದ್ದುಕೊಂಡು ತನ್ನ ಸ್ಥಾನವನ್ನು ಒಂದಿಷ್ಟೂ ಬಿಡದೆ ಇದ್ದುಕೊಂಡಿರುವದೆಂದು ಜ್ಯೋತಿಃಶಾಸ್ತ್ರಜ್ಞರು ಹೇಳುವರಷ್ಟೆ? ಇದು ಯಾರ ಬಲದಿಂದ ನಿಂತಿರುವದು? ಆದಿಶೇಷನು ಇದನ್ನು ತಲೆಯ ಮೇಲೆ ಹೊತ್ತಿರುವನೆಂದೂ ಅವನಿಗೆ ಸಾವಿರ ಹೆಡೆಗಳೆಂದೂ ಪುರಾಣಗಳಲ್ಲಿ ವರ್ಣಿತವಾಗಿರುವದು. ಈ ಭೂಮಿಯನ್ನು ಇದ್ದಲ್ಲಿ ಇರುವಂತೆ ನಿಲ್ಲಿಸಿಕೊಂಡಿರುವ ಆತನ ಶಕ್ತಿಯನ್ನು ಎಷ್ಟೆಂದು ಹೇಳುವದು ! ಆ ಶಕ್ತಿಗೆ ಅಂತವುಂಟೆ? ಅದರಿಂದಲೇ ಅವನಿಗೆ ಅನಂತನೆಂಬ ಅನ್ವರ್ಥವಾದ ಇನ್ನೊಂದು ಹೆಸರು ಬಂದಿರುವದು. ಚೆನ್ನಾಗಿ ನೋಡಿದರೆ ಈ **ಅನಂತ**ನೆಂಬುವನು ಯಾರು? ಆ ಪರಮಾತ್ಮನ ಶಕ್ತಿಯೇ, ಇದನ್ನು ಮೊದಲನೆಯ ಶ್ಲೋಕದಲ್ಲಿಯೇ ಸೂಚಿಸಿರುತ್ತದೆ. ಪರಮಾತ್ಮನು ಭೂಮಿಯನ್ನೂ ಗ್ರಹಗಳನ್ನೂ ನಕ್ಷತ್ರಗಳನ್ನೂ ಲೀಲಾಮಾತ್ರದಿಂದ ನಿರ್ಮಿಸಿ ಅವುಗಳು ತಮ್ಮ ತಮ್ಮ ಗತಿಯ ಚಕ್ರವನ್ನು ಬಿಟ್ಟು ಅತ್ತಿತ್ತ ಅಲುಗಾಡದಂತೆ ತಾನೇ ಅನಂತರೂಪದಿಂದ ತಡೆದಿಟ್ಟಿರುವನು. ಪರಮಾತ್ಮಶಕ್ತಿರೂಪನಾದ ಈ ಅನಂತನಿಗೆ ಎಷ್ಟು ರೂಪಗಳು ! ಲೋಕದಲ್ಲಿರುವ ಪ್ರತಿಯೊಂದು ವಸ್ತುವಿನಲ್ಲಿ ತೋರಿಬರುವ ಶಕ್ತಿವಿಶೇಷಗಳೆಲ್ಲ ಈ ಅನಂತನ ರೂಪಗಳೇ. ಎಳೆಯುವ ಶಕ್ತಿ, ದಬ್ಬುವ ಶಕ್ತಿ, ಪರಮಾಣುಗಳನ್ನು ಕೂಡಿಡುವ ಶಕ್ತಿ, ಬಿಚ್ಚುವ ಶಕ್ತಿ, ಅಂಟಿಸುವ ಶಕ್ತಿ, ಬಿಡಿಸುವ, ಶಕ್ತಿ, ಉಷ್ಣಶಕ್ತಿ, ಪ್ರಕಾಶಶಕ್ತಿ, ಶಬ್ದಶಕ್ತಿ, ವಿದ್ಯುಚ್ಛಕ್ತಿ, ಸೂಚಿಕಾಂತಶಕ್ತಿ - ಎಂದು ನಾನಾರೂಪವಾಗಿ

ತೋರುತ್ತಿರುವ ಶಕ್ತಿಗಳೆಲ್ಲ ಒಂದೇ ಶಕ್ತಿಯ ಮಾರ್ಪಾಡುಗಳೆಂದು ಭೌತಿಕ ಶಾಸ್ತ್ರಜ್ಞರೂ ಈಗ ಒಪ್ಪಿಕೊಳ್ಳುತ್ತಿದ್ದಾರೆ. ಹೆಚ್ಚೇಕೆ? ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂದು ವಿಂಗಡಿಸಬಹುದಾದ ಮೂರು ಪಂಗಡಗಳಲ್ಲಿ ಸೇರಿರುವ ಶಕ್ತಿಗಳೆಲ್ಲ ಈ ಅನಂತನ ಶಕ್ತಿಗಳೇ. ನಿಜವಾಗಿ **ಗಣೇಶನ ಭಕ್ತರಿಗೂ ಗಣೇಶನಿಗೂ ಭೇದವಿರುವದಿಲ್ಲ. ಆದ್ದರಿಂದ ಅವರಿಗೆ ಉಂಟಾಗದೆ ಇರುವ ಸಿದ್ಧಿಗಳೇ ಇಲ್ಲ ಮೆದ** ಧಾರಾಳವಾಗಿ ನಂಬಬಹುದು. ಮುಖ್ಯವಾಗಿ ಆ ಗಣೇಶನಲ್ಲಿ ಯಾವಾಗಲೂ ಎಡೆಬಿಡದೆ ನಿರತಿಶಯವಾದ ಪ್ರೇಮವನ್ನು ಸಂಪಾದಿಸಿ ಕೊಳ್ಳಬೇಕು, ಅಷ್ಟೆ. ಆಮೇಲೆ ಇಂಥ ಸಿದ್ಧಿಯು ಆಗುವದು, ಇಂಥದ್ದು ಆಗುವದಿಲ್ಲ - ಎಂಬ ವಿಂಗಡಕ್ಕೇನೂ ಕಾರಣವಿರುವದಿಲ್ಲ.

### ಯತೋಽನೇಕಧಾ ಸ್ವರ್ಗಲೋಕಾ ಹಿ ನಾನಾ

ಆ ಪರಮಾತ್ಮನು ಈ ಬ್ರಹ್ಮಾಂಡವನ್ನು ನಿರ್ಮಿಸಿ ಇದರಲ್ಲಿ ಸ್ವರ್ಗ, ಮರ್ತ್ಯ, ಪಾತಾಳ - ಎಂಬ ಮೂರು ವಿಂಗಡವನ್ನು ಮಾಡಿ ಪ್ರಾಣಿಗಳಿಗೆ ಬೇಕಾಗುವ ಸಂಭಾರಗಳನ್ನೂ ಇದರಲ್ಲಿಟ್ಟು ತನ್ನನ್ನು ಪ್ರೇಮದಿಂದ ಭಜಿಸು ವವರಿಗೆ ಈ ಲೋಕದಲ್ಲಿ ಸುಖವನ್ನೂ ಪರಲೋಕದಲ್ಲಿ ಕರ್ಮಫಲಗಳ ಉಪ ಭೋಗವನ್ನೂ ಕೊಡುವನು. **ಪುಣ್ಯಕರ್ಮವನ್ನು ಮಾಡುವವರಿಗೆ ಉತ್ತಮವಾದ ಭೋಗಗಳಿಂದ ಕೂಡಿದ ಮೇಲಿನ ಲೋಕಗಳನ್ನು ಏರ್ಪಡಿಸಿರುವನು. ಪಾಪ ಕರ್ಮವನ್ನು ಮಾಡುವವವರಿಗೆ ಕೆಳಗಿನ ದುಃಖಾನುಭವದ ಲೋಕಗಳನ್ನು ನಿರ್ಮಿಸಿ ರುವನು ; ಸಂಸಾರಿಗಳಿಗೆ ಭೂಲೋಕವನ್ನು ನಿರ್ಮಿಸಿರುವನು. ಪರಮ ಭಕ್ತಿಯಿಂದ ತನ್ನನ್ನು ಸೇರಿ ಭಜಿಸುತ್ತಿರುವವರಿಗೆ ಅನಂತವಾದ ಮೋಕ್ಷಸುಖವನ್ನೇ ಕೊಡುವನು.**

೮

**ಯತೋ ವೇದವಾಚೋಽತಿಕುಂಠಾ ಮನೋಭಿಃ**
**ಸದಾ ನೇತಿ ನೇತೀತಿ ಯತ್ತಾ ಗೃಣನ್ತಿ ।**
**ಪರಬ್ರಹ್ಮರೂಪಂ ಚಿದಾನನ್ದಭೂತಂ**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥**

**ಭಾವಾರ್ಥ** :- ಯಾವಾತನನ್ನು ಗೋಚರಿಸಲಾರದೆ ವೇದವಾಕ್ಕುಗಳೂ ಮನೋವೃತ್ತಿಗಳೂ ಕುಗ್ಗುತ್ತವೆಯೋ, ಯಾವಾತನ ಸ್ವರೂಪವನ್ನು 'ಇದಲ್ಲ, ಇದಲ್ಲ' ಎಂದು ಯಾವಾಗಲೂ ಹೇಳುತ್ತಿರುವವೋ - ಜ್ಞಾನಾನಂದಸ್ವರೂಪವಾದ ಪರಬ್ರಹ್ಮವೆನಿಸಿರುವ ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

# ವಿವರಣೆ

## ವೇದವಾಚೋ ನೇತಿ ನೇತೀತಿ ಗೃಣನ್ತಿ

ಗಣೇಶನ ಮಹಿಮೆಯನ್ನು ಈ ವಿಧದಲ್ಲಿ ಹೇಳಿ ಮುಗಿಸುವದು ಎಂದಿಗೂ ಸಾಧ್ಯವಿಲ್ಲ ; ಏಕೆಂದರೆ ಆತನು ಮಾಡಿರುವ ಸೃಷ್ಟಿಯು ಕಾಲ ದೇಶಗಳಿಂದ ಕೂಡಿರುವದು, ಈ ಕಾಲದೇಶಗಳಿಗೆ ಇಲ್ಲಿಗೆ ಮುಗಿಯಿತೆಂಬ ಅಂತವೇ ಇರುವದಿಲ್ಲ. ಕಾಲದೇಶಗಳು ಇರುವವರೆಗೂ ಆತನ ಸೃಷ್ಟಿಶಕ್ತಿಯೂ ಪಾಲನಶಕ್ತಿಯೂ ಸಂಹಾರಶಕ್ತಿಯೂ ದುಷ್ಟ ನಿಗ್ರಹಶಕ್ತಿಯೂ ಭಕ್ತಾನುಗ್ರಹ ಶಕ್ತಿಯೂ ಕಾಣಿಸಿ ಕೊಳ್ಳುತ್ತಲೇ ಇರುವವು. ಹೀಗಿರುವಾಗ ಆತನ ಅಪಾರವಾದ ಈ ಮಹಿಮೆಯನ್ನು ವರ್ಣಿಸುವದು ಯಾರಿಂದ ಆದೀತು?

ಇದು ಹೋಗಲಿ. ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವ ಆತನ ಮೂಲರೂಪವನ್ನಾದರೂ ವರ್ಣಿಸೋಣವೆಂದರೆ ಅದು ವರ್ಣನೆಗೇ ಗೋಚರವಾಗುವಂತಿಲ್ಲ. ಏಕೆಂದರೆ ಈ ಮೂಲಸ್ವರೂಪವು ದ್ರವ್ಯ, ಗುಣ, ಕ್ರಿಯೆ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ - ಎಂದು ತಾರ್ಕಿಕರು ವಿಂಗಡಿಸಿರುವ ಯಾವ ಪದಾರ್ಥಗಳ ಗುಂಪಿಗೂ ಸೇರುವದಿಲ್ಲವಾದ್ದರಿಂದ ಮೊದಲನೆಯ ಶ್ಲೋಕದ ವಿವರದಲ್ಲಿ ಹೇಳಿರುವಂತೆ ಇದನ್ನು ಪ್ರತ್ಯಕ್ಷವೇ ಮುಂತಾದ ಯಾವ ಪ್ರಮಾಣಗಳಿಂದಲೂ ಅರಿಯುವದಕ್ಕೆ ಬರುವಂತಿಲ್ಲ.

ಪರಮಾತ್ಮನ ರೂಪವನ್ನು ವೇದದಲ್ಲಿ ತಿಳಿಸಿದೆಯೆಂದೂ ವೇದಗಳ ಉಪದೇಶದಿಂದ ಪರಮಾತ್ಮಸ್ವರೂಪವನ್ನು ಅರಿತು ಮುಕ್ತರಾಗಬೇಕೆಂದೂ ಹೇಳುತ್ತಿರುವರಲ್ಲ? ಪರಮಾತ್ಮನು ಶಾಸ್ತ್ರಪ್ರಮಾಣಕ್ಕೂ ಸಿಕ್ಕದೆ ಇದ್ದರೆ ಅವನನ್ನು ನಾವು ಅರಿತುಕೊಳ್ಳುವದು ತಾನೆ ಹೇಗೆ?- ಎಂದು ಕೆಲವರಿಗೆ ಯೋಚನೆ ಯುಂಟಾಗಬಹುದು. **ವೇದಗಳೂ ವಚನರೂಪವೇ** ಆಗಿರುವದರಿಂದ ಮಾತಿ

ನಿಂದ ಹೇಳುವದಕ್ಕಾಗದ ಸ್ವರೂಪವುಳ್ಳ **ಈ ಪರಮಾತ್ಮನನ್ನು ಅವೂ ಇಂಥವನೆಂದು ಹೇಳಲಾರವು.** ಮಾತಿಗಾಗಲಿ ಮನಸ್ಸಿಗಾಗಲಿ ಗೋಚರವಾಗ ಬೇಕಾದರೆ ವಸ್ತುವು ದ್ರವ್ಯಗುಣಕ್ರಿಯಾದಿಗಳಲ್ಲಿ ಒಂದಾಗಿದ್ದೇತೀರಬೇಕು. ಪರಮಾತ್ಮನ ಮೂಲ ರೂಪವು ಇವುಗಳಲ್ಲಿ ಯಾವದೊಂದೂ ಅಲ್ಲವಾದ್ದರಿಂದ **ಅದನ್ನುಯಾವ ವೇದವಾಕ್ಯೂ ಹೇಳಲಾರದು, ಎಂಥ ಬುದ್ಧಿವಂತನ ಬುದ್ಧಿಯೂ ಅದನ್ನು ಗ್ರಹಿಸಲಾರದು.** ಆದ್ದರಿಂದಲೇ ನಾವು ಯಾವಯಾವದು ಪರಮಾತ್ಮ ಸ್ವರೂಪ ವಾಗಿರುವದೆಂದು ತಿಳಿಯಬಹುದೋ ಅದೊಂದೂ ಆತನ ಸ್ವರೂಪ ವಲ್ಲವೆಂದು ವೇದಗಳು ಹೇಳುತ್ತಿರುವವು.

## ಪರಬ್ರಹ್ಮರೂಪಂ ಚಿದಾನನ್ದಭೂತಮ್

ಹಾಗಾದರೆ ಆ ಪರಮಾತ್ಮನು ಇಂಥವನೆಂದು ನಾವು ಅರಿತುಕೊಳ್ಳುವದು ಹೇಗೆ? ತಿಳಿಸುವದಕ್ಕೆ ಬೇಕೇಬೇಕಾದ ಮಾತನ್ನೂ ತಿಳಿಯುವದಕ್ಕೆ ಬೇಕೇಬೇಕಾದ ಮನಸ್ಸನ್ನೂ ಬಿಟ್ಟರೆ ನಮಗೆ ಬೇರೆ ಸಾಧನವೇನು ಉಳಿಯುವದು?- ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಪರಮಾತ್ಮನನ್ನು ಇಂಥವನೆಂದು ಬೆಟ್ಟಿಟ್ಟು ತಿಳಿಸುವದಕ್ಕೆ ಆಗುವದಿಲ್ಲವಾದರೂ ಅವನ ಸ್ವರೂಪವನ್ನು ತಿಳಿಯುವದಕ್ಕೆ ಆಗುವದೇ ಇಲ್ಲವೆಂದು ಭಾವಿಸಬಾರದು. ಆತನು ನಮ್ಮೆಲ್ಲರ ಆತ್ಮನೇ ಆಗಿರುವನು. ಹೊರಗಿನ ವಿಷಯಗಳನ್ನೂ ಒಳಗಿನ ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ- ಇವುಗಳನ್ನೂ ಯಾವಾಗಲೂ ನಮಗೆ ತಿಳಿಸಿಕೊಡುತ್ತಿರುವ ನಿತ್ಯ ಚೈತನ್ಯವೇ ಆತನು. ಈ ಜ್ಞಾನದಿಂದ ಎಲ್ಲವನ್ನೂ ಅರಿಯುವೆವು. ''ಜ್ಞಾನವನ್ನು ಏತರಿಂದ ಅರಿಯಬೇಕು?'' ಎಂಬ ಪ್ರಶ್ನೆಯೇ ಮೊದಲು ಸರಿಯಲ್ಲ. ಏಕೆಂದರೆ ಯಾವಾಗಲೂ ತೋರಿಕೊಳ್ಳದೆ ಇರುವ ಜಡವಸ್ತುಗಳಿಗೆ ಜ್ಞಾನದ ಬೆಳಕು ಬಿದ್ದ ಮೇಲೆಯೇ ಅವುಗಳು ಗೋಚರ ವಾಗಬೇಕೆಂಬುದು ಯುಕ್ತವಾದದ್ದೇ; ಯಾವಾಗಲೂ ನಮ್ಮ ಸ್ವರೂಪವಾಗಿ ಎಲ್ಲವನ್ನೂ ತನ್ನ ಬೆಳಕಿನಿಂದ ತೋರಿಸುತ್ತಿರುವ ಜ್ಞಾನಕ್ಕೆ ಮತ್ತೇತರ ಬೆಳಕು ಬೇಕಾಗಿದ್ದೀತು? ಆದ್ದರಿಂದ ಆ ಪರಮಾತ್ಮನನ್ನು ಅರಿತುಕೊಳ್ಳುವದೆಂದರೆ ಹೀಗೆಯೇ; ಆತನು **ಮಿಕ್ಕ ವಸ್ತುಗಳಂತೆ ವಿಷಯನಲ್ಲ, ಮತ್ತೊಂದರಿಂದ**

**ಬೆಳಗಬೇಕಾದ ಅವಶ್ಯಕತೆಯುಳ್ಳ ರೂಪಿನವನಲ್ಲ. ಮಿಕ್ಕ ವಸ್ತುಗಳೆಲ್ಲವನ್ನೂ ಬೆಳಗುತ್ತಿರುವ ಸ್ವಯಂಪ್ರಕಾಶರೂಪನಾದ ನಮ್ಮ ಆತ್ಮನೇ** ಎಂದು ಅನುಭವದಿಂದ ನಿಶ್ಚಯಿಸುವದೇ ಆತನ ಅರಿವು.

ಪರಮಾತ್ಮನು ಜ್ಞಾನಸ್ವರೂಪನಾಗಿರುವನೆಂಬುದು ಮಾತ್ರವೇ ಅಲ್ಲ; ಅವನು ಯಾವಾಗಲೂ ಆನಂದಸ್ವರೂಪನಾಗಿಯೇ ಇರುವನು. ನಮಗೆ ಮಿಕ್ಕ ಎಲ್ಲಾ ಪದಾರ್ಥಗಳೂ ಪ್ರಿಯವಾಗಬೇಕಾದರೆ ನಮ್ಮ ಮೇಲಿನ ಪ್ರೀತಿಯಿಂದಲೇ. ಯಾವ ನಮ್ಮ ಆತ್ಮನಿಗಾಗಿ ಎಲ್ಲವನ್ನೂ ಬಯಸುವೆವೋ ಆ ನಮ್ಮ ಆತ್ಮನು ಎಲ್ಲಕ್ಕಿಂತಲೂ ಪ್ರಿಯನಲ್ಲವೆ? ಮಿಕ್ಕ ವಸ್ತುಗಳು ಕೆಲವು ಕಾಲ ಪ್ರಿಯವಾಗಿದ್ದು ಆಮೇಲೆ ಅಪ್ರಿಯವಾದರೂ ಆಗಬಹುದು. ಏಕೆಂದರೆ ಅವುಗಳು ಮಾರ್ಪಾಡುಗಳುಳ್ಳವು. ನಮ್ಮ ಮನಸ್ಸು ಬೇರ್ಪಡುತ್ತಲೇ ಇರುವದರಿಂದ ಅವುಗಳ ವಿಷಯದಲ್ಲಿ ನಮ್ಮ ಅಭಿಪ್ರಾಯವು ಬೇರೆ ಆಗಿ ಅವು ನಮಗೆ ಬೇಡವಾಗಬಹುದು. ಆದರೆ ನಮ್ಮ ಆತ್ಮನು ಮಾತ್ರ ಹಾಗಲ್ಲ. ಬೇಕು, ಬೇಡ-ಎಂಬ ಯಾವ ಪಂಗಡಕ್ಕೂ ಅವನು ಸೇರಿದವನಲ್ಲ; ಅವನಿಗಾಗಿ ಮಿಕ್ಕದ್ದೆಲ್ಲವೂ ಬೇಕಾದದ್ದೋ , ಬೇಡವಾದದ್ದೋ ಆಗುವದು. ಆದ್ದರಿಂದ ಎಂದೆಂದಿಗೂ ನಮ್ಮನ್ನು ಬಿಡದೆ, ಎಂದೆಂದಿಗೂ ಬೇಡವೆನಿಸದೆ, ಪರಮಪ್ರೇಮಕ್ಕೆ ವಿಷಯನಾಗಿರುವ ಈ ಪರಮಾತ್ಮನು **ಪರಮಾನಂದಸ್ವರೂಪನೆಂ**ದೂ ಆಯಿತು.

ಇಲ್ಲಿ ಒಂದು ಆಕ್ಷೇಪವು ತಲೆದೋರಬಹುದು : ಪರಮಾತ್ಮನು ಎಲ್ಲವನ್ನೂ ಸೃಷ್ಟಿಸಿರುವನೆಂದೂ ಎಲ್ಲವೂ ಅವನ ರೂಪವೇ ಎಂದೂ ಇದುವರೆಗೆ ಹಾಡಿ ಹೊಗಳಿ ಈಗ ಇದು ಯಾವದೂ ಆತನ ಸ್ವರೂಪವಲ್ಲವೆಂದೂ ದ್ರವ್ಯಗುಣಕ್ರಿಯಾದಿ ರೂಪಗಳಿಂದ ಕಾಣುವ ವಿಷಯಗಳೆಲ್ಲ ಬೇಕು, ಬೇಡ-ಎಂಬ ಪಂಗಡಕ್ಕೆ ಒಳಗಾಗುವವೆಂದೂ ಪರಮಾತ್ಮನು ಈ ವಿಷಯಗಳನ್ನು ಅರಿಯುವ ಜ್ಞಾನರೂಪನೆಂದೂ ಈ ರೂಪದಲ್ಲಿ ನಮ್ಮ ಆತ್ಮನೇ ಆಗಿರುವದರಿಂದ ಪರಮಪ್ರೇಮಕ್ಕೆ ವಿಷಯನೆಂದೂ ನಿತ್ಯಾನಂದಸ್ವರೂಪನೆಂದೂ ವರ್ಣಿಸಿರುವದು ತನಗೆತಾನೇ ವಿರುದ್ಧವಲ್ಲವೆ? ಪರಮಾತ್ಮನು ಇದೆಲ್ಲವೂ ಆಗಿರುವನೆಂಬುದಾದರೂ ನಿಜವಾಗಬೇಕು ; ಅಥವಾ ಅವನು ಇದೆಲ್ಲಕ್ಕಿಂತಲೂ ಬೇರೆ ಎಂಬುದಾದರೂ ನಿಜವಾಗಬೇಕು. ಇವೆರಡೂ ಏಕಕಾಲಕ್ಕೆ ಹೇಗೆ ನಿಜವಾದಾವು?

ಈ ಆಕ್ಷೇಪಕ್ಕೆ ಸಮಾಧಾನವೇನೆಂದರೆ : ಇದೆಲ್ಲವೂ ಪರಮಾತ್ಮನು ಎಂಬುದೇ ನಿಜವಾದ ಸಿದ್ಧಾಂತವು. ಈ ಸಿದ್ಧಾಂತವನ್ನು ತಿಳಿಸುವದಕ್ಕೆ ಶಾಸ್ತ್ರದಲ್ಲಿ ಎರಡು ಮಾರ್ಗವನ್ನು ಅನುಸರಿಸಿರುತ್ತದೆ. ನಮಗೆ ಏನೇನು ಗೋಚರ ವಾಗುತ್ತಿದೆಯೋ, ಯಾವಯಾವದನ್ನು ನಾವು ಕಂಡು ಕೇಳಿ ಊಹಿಸಿ ತಿಳಿಯ ಬಹುದೋ, ಇದೆಲ್ಲವೂ ಆ ಪರಮಾತ್ಮನಿಂದಲೇ ಬಂದಿರುವದು, ಆತನಿಂದಲೇ ನಿಂತಿರುವದು, ಆತನಲ್ಲಿಯೇ ಲಯವಾಗುವದು- ಎಂದು ವಿವರಿಸುವದು ಮೊದಲನೆಯ ಮಾರ್ಗ. ಈ ಮಾರ್ಗಕ್ಕೆ **ಅಧ್ಯಾರೋಪ**ವೆಂದು ಹೆಸರು. ಹೀಗೆ ಜಗತ್ತಿನಲ್ಲೆಲ್ಲ ಬ್ರಹ್ಮಬುದ್ಧಿಯು ಬೇರೂರಿದ ಮೇಲೆ ಆ ಬ್ರಹ್ಮದ ನಿಜವಾದ ಸ್ವರೂಪವನ್ನು ನಮ್ಮ ಲಕ್ಷ್ಯಕ್ಕೆ ತಂದು ಅದಕ್ಕಿಂತ ಬೇರೆಯಾಗಿ ಮತ್ತೇನೂ ಇಲ್ಲವೆಂದು ಹೇಳುವದು ಎರಡನೆಯ ಮಾರ್ಗವು. ಇದಕ್ಕೆ **ಅಪವಾದ**ವೆಂದು ಹೆಸರು. ಈ ದೃಷ್ಟಿಯಿಂದ ನೋಡಿದರೆ ಪರಮಾತ್ಮನಿಗಿಂತ ಬೇರೆಯಾಗಿ ಏನೇನೂ ಇರುವದಿಲ್ಲ; ಇರುವದೆಲ್ಲ ಆತನೇ. ಸಕಲವೂ ಜ್ಞಾನಾನಂದಸ್ವರೂಪನಾದ ಈ ಪರಮಾತ್ಮನೇ. ಈ ಪರಮಾತ್ಮಸ್ವರೂಪದಿಂದ ಸಕಲವೂ ಸತ್ಯವಾಗಿರುವದು, ನಿಜವಾಗಿ ದ್ರವ್ಯಗುಣಾದಿರೂಪಗಳಿಂದ ಬಗೆಬಗೆಯಾಗಿ ತೋರುತ್ತಿರುವದೆಂದು ಏನೇನನ್ನು ಕಲ್ಪಿಸಿಕೊಂಡಿರುವೆವೋ ಅದು ಯಾವದೂ ಸ್ವಯಂಪ್ರಕಾಶವಾದ ಆತ್ಮಚೈತನ್ಯಕ್ಕಿಂತ ಬೇರೆಯಾಗಿ ತೋರಿದ್ದನ್ನು ನಾವೆಂದೂ ನೋಡಲಿಲ್ಲ. ಚೈತನ್ಯವು ಇಲ್ಲದ್ದನ್ನು ಕಾಣುವದಾಗಲಿ ಇಲ್ಲದಿರುವ ಸ್ಥಿತಿಯನ್ನು ಊಹಿಸಿಕೊಳ್ಳುವದಾಗಲಿ ಎಂದಿಗೂ ಸಾಗದು; ಹೀಗಿರುವಲ್ಲಿ ಚೈತನ್ಯವಿಲ್ಲದೆ ಜಗತ್ತೆಂಬುದು ಬೇರೆ ಯಾಗಿರುವದೆಂದು ನಾವು ತಿಳಿಯುವದಕ್ಕೆ ಅವಕಾಶವೆಲ್ಲಿರುವದು? ಆದರೆ ಚೈತನ್ಯವು ಮಾತ್ರ ಈ ಜಗತ್ತನ್ನು ನಂಬಿಕೊಂಡು ಕೂತಿರುವದಿಲ್ಲ; ಸುಷುಪ್ತಿ ಮದ ಮೂರ್ಛಾದಿಗಳಲ್ಲಿಯೂ ಸಮಾಧಿಯಲ್ಲಿಯೂ ಯಾವ ಜಗತ್ತೂ ಇರುವದಿಲ್ಲ. ಆದರೂ ನಮ್ಮ ಚೈತನ್ಯವು ಮಾತ್ರ ಇದ್ದುಕೊಂಡೇ ಇರುವದು. ಆದ್ದರಿಂದ ನಮ್ಮೆಲ್ಲರ ಆತ್ಮನಾಗಿರುವ ಈ ಪರಮಾತ್ಮನ ನಿಜವಾದ ಸ್ವರೂಪವು ಜ್ಞಾನಾನಂದಮಯವಾಗಿಯೇ ಇರುವದು, ಇವನ ರೂಪದಲ್ಲಿಯೇ ಜಗತ್ತೆಲ್ಲವೂ ಇರುವದು. ಈ ಸ್ವರೂಪಕ್ಕಿಂತ ಬೇರೆಯಾದ ರೂಪದಲ್ಲಿ ಜಗತ್ತೆಂಬುದೊಂದು

ಬೇರೆಯಾಗಿದ್ದುಕೊಂಡಿರುವದೆಂಬುದು ಅಜ್ಞಾನಿಗಳ ಕಲ್ಪನೆಯೇ ಆಗಿರುವದು - ಎಂದು ಸಿದ್ಧವಾಯಿತು.

ಹೀಗೆ **ಸರ್ವವೂ ಪರಬ್ರಹ್ಮರೂಪನಾದ ಜ್ಞಾನಾನಂದಸ್ವರೂಪನಾದ ಈ ಗಣೇಶನೇ** ಆಗಿರುವದರಿಂದ ಈ ಸ್ವರೂಪವನ್ನು ಯಾವಾಗಲೂ ಚಿಂತಿಸುತ್ತಲೂ ಜಗತ್ತೆಲ್ಲವೂ ಈತನ ಸಗುಣಮೂರ್ತಿಯೆಂದು ತಿಳಿದು ಆತನಿಗೆ ನಮಸ್ಕರಿಸುತ್ತಲೂ ಆತನನ್ನು ಭಜಿಸುತ್ತಲೂ ಇರಬೇಕು.

# ಫಲಸ್ತುತಿ

**ಶ್ರೀಗಣೇಶ ಉವಾಚ :-**

ಪುನರೂಚೇ ಗಣಾಧೀಶಃ ಸ್ತೋತ್ರಮೇತತ್ಪಠೇನ್ನರಃ ।
ತ್ರಿಸಂಧ್ಯಂ ತ್ರಿದಿನಂ ತಸ್ಯ ಸರ್ವಕಾರ್ಯಂ ಭವಿಷ್ಯತಿ ॥೧॥
ಯೋ ಜಪೇದಷ್ಟದಿವಸಂ ಶ್ಲೋಕಾಷ್ಟಕಮಿದಂ ಶುಭಮ್ ।
ಅಷ್ಟವಾರಂ ಚತುರ್ಥ್ಯಾಂ ತು ಸೋಽಷ್ಟಸಿದ್ಧೀರವಾಪ್ನುಯಾತ್ ॥೨॥
ಯಃ ಪಠೇನ್ಮಾಸಮಾತ್ರಂ ತು ದಶವಾರಂ ದಿನೇ ದಿನೇ ।
ಸ ಮೋಚಯೇದ್ಬನ್ಧಗತಂ ರಾಜವಧ್ಯಂ ನ ಸಂಶಯಃ ॥ ೩ ॥
ವಿದ್ಯಾಕಾಮೋ ಲಭೇದ್ವಿದ್ಯಾಂ ಪುತ್ರಾರ್ಥೀ ಪುತ್ರಮಾಪ್ನುಯಾತ್ ।
ವಾಂಛಿತಾನ್ ಲಭತೇ ಸರ್ವಾನೇಕವಿಂಶತಿವಾರತಃ ॥ ೪ ॥
ಯೋ ಜಪೇತ್ಪರಯಾ ಭಕ್ತ್ಯಾ ಗಜಾನನಪರೋ ನರಃ ।
ಏವಮುಕ್ತ್ವಾ ತತೋ ದೇವಶ್ಚಾನ್ತರ್ಧಾನಂ ಗತಃ ಪ್ರಭುಃ ॥ ೫ ॥

**ಭಾವಾರ್ಥ :-** ಈ ಸ್ತೋತ್ರವನ್ನು ಕೇಳಿ ಗಣಾಧೀಶನು ಮತ್ತೆ ಅಪ್ಪಣೆ ಕೊಡಿಸಿದನೇನೆಂದರೆ : " ಯಾವ ಮನುಷ್ಯನು ಮೂರು ದಿನಗಳವರೆಗೆ ಮೂರು ಸಂಧ್ಯಾ ಕಾಲಗಳಲ್ಲಿಯೂ ಈ ಸ್ತೋತ್ರವನ್ನು ಪಠಿಸುವನೋ ಆತನ ಸಕಲ ಕಾರ್ಯಗಳೂ ಸಿದ್ಧಿಸುವವು. ಯಾವಾತನು ಎಂಟು ದಿನಗಳವರೆಗೆ ಈ ಎಂಟು ಶ್ಲೋಕಗಳನ್ನೂ ಜಪಿಸುವನೋ ಅಥವಾ ಚೌತಿಯ ದಿನ ಎಂಟು ಸಲ ಜಪಿಸುವನೋ ಆತನಿಗೆ ಎಂಟು ಸಿದ್ಧಿಗಳೂ ದೊರೆಯುವವು. ಒಂದೊಂದು ದಿನಕ್ಕೆ ಹತ್ತು ಸಲದಂತೆ ಒಂದು ತಿಂಗಳವರೆಗೆ ಯಾವಾತನು ಓದುತ್ತಾನೋ ಆತನು ಕಾರಾಗೃಹದಲ್ಲಿ ರಾಜವಧ್ಯನಾಗಿರುವವನನ್ನು ಕೂಡ ಬಿಡಿಸುವ ಶಕ್ತಿಯುಳ್ಳವನಾಗುವನು. ವಿದ್ಯೆಯಲ್ಲಿ ಆಸೆಯಿದ್ದಾತನಿಗೆ ವಿದ್ಯೆಯು ಸಿಕ್ಕುವದು ; ಪುತ್ರನಲ್ಲಿ ಆಸೆಯಿದ್ದಾತನಿಗ

ಪುತ್ರನಾಗುವನು. ಇಪ್ಪತ್ತೊಂದು ಸಲ ಜಪಮಾಡುವವನು ತನಗೆ ಏನೇನು ಆಗಬೇಕೆಂದು ಬಯಸುವನೋ ಅದೆಲ್ಲವೂ ಅವನಿಗೆ ಆಗುವದು. ಯಾವಾತನು ಗಜಾನನನಾದ ನನ್ನಲ್ಲಿಯೇ ತಾತ್ಪರ್ಯವಿಟ್ಟು ಪರಭಕ್ತಿಯಿಂದ ಈ ಸ್ತೋತ್ರವನ್ನು ಜಪಿಸುವನೋ ಆತನಿಗೆ ಈ ಮೇಲೆ ಹೇಳಿದ ಫಲಗಳು ಆಗುವವು. '' ಹೀಗೆಂದು ಹೇಳಿ ಪ್ರಭುವಾಗಿರುವ ಆ ಗಣೇಶನು ಅಂತರ್ಧಾನವನ್ನು ಹೊಂದಿದನು.

## ವಿವರಣೆ

ಪರಮಾತ್ಮನೇ ಸಕಲವೂ ಆಗಿರುವನೆಂಬರ್ಥದ ಈ ಶ್ಲೋಕಗಳನ್ನು ಭಕ್ತಿಯಿಂದ ಓದುವವರಿಗೆ ಇಹಪರಲೋಕಗಳಲ್ಲಿ ಸುಖವು ದೊರೆಯುವ ದೆಂಬುದು ಫಲಸ್ತುತಿಯ ಒಟ್ಟರ್ಥವು. ಮುಖ್ಯವಾಗಿ ಈ ಸ್ತೋತ್ರವನ್ನು ಎಡೆಬಿಡದೆ ಹೇಳಿಕೊಳ್ಳುತ್ತಾ ಇದರ ಅರ್ಥವನ್ನು ಮನಸ್ಸಿಗೆ ತಂದುಕೊಳ್ಳುತ್ತಿರುವವರಿಗೆ ಕೆಟ್ಟ ಕರ್ಮಗಳಲ್ಲಿ ಮನಸ್ಸು ಹರಿಯುವದಿಲ್ಲ, ಒಳ್ಳೆಯ ದಾರಿಯಲ್ಲಿ ಹೋಗುವ ಮನಸ್ಸು ಬರುವದು. ಸಾಧುಗಳ ಸಂಗವು ದೊರೆತು, ಅವರಲ್ಲಿ ಮಾಡಿದ ಶುಶ್ರೂಷೆಯಿಂದ ತತ್ತ್ವಜ್ಞಾನವು ಲಭಿಸುವದು. ಆಗ ಎಲ್ಲ ಅನಿಷ್ಟವೂ ಬಿಡುಗಡೆಯಾದಂತೆ, ಎಲ್ಲಾ ಇಷ್ಟವೂ ಕೈ ಸೇರಿದಂತೆ. ಜಾಣರಾದವರು ಇಲ್ಲಿ ಹೇಳಿರುವ ಸಣ್ಣಪುಟ್ಟ ಫಲಗಳಿಗೆ ಬಾಯಿನೀರುಕರೆಯದೆ ಈ ಪರಮಪುರುಷಾರ್ಥವನ್ನು ಪಡೆಯುವದಕ್ಕೆ ಯತ್ನಿಸಬೇಕೆಂಬುದೇ ಈ ಫಲಕಥನದ ಉದ್ದೇಶವು.